ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮಂಗಳವಾರ ನಡೆದ ಮಹಿಳಾ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡ 169 ರನ್‌ಗಳ ಗುರಿ ನೀಡಿದೆ....

04 ಫೆಬ್ರವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 321 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಗರ್ಭಾಶಯ ಕೊರಳ ಕ್ಯಾನ್ಸರ್ ಸ್ತ್ರೀ ಆರೋಗ್ಯದ ರಕ್ಷಣೆಗೆ ಮಹತ್ವದ ಹೆಜ್ಜೆ » 2



ಕಸ ಎಸೆಯುವ ಜಾಗದಲ್ಲಿ ಗಿಡಗಳ ನೆಟ್ಟ ಪ.ಪಂ. : ಪ್ರಶಂಸೆ » 3



ಜಾಗತಿಕ ಬಿಕ್ಕಟ್ಟಿನ ಮಧ್ಯೆ ಅಮೇರಿಕಾ-ಭಾರತ ಒಪ್ಪಂದ » 4

# ವಿಬಿ-ಜಿ ರಾಮ್ ಜಿ ವಿರುದ್ಧ ನಿರ್ಣಯ ಮಂಡನೆ

• ಪ್ರಜೋದಯ ವರದಿ

- ಮನರೇಗಾ ಮರು ಜಾರಿಗೆ ಆಗ್ರಹ
- ವಿಪಕ್ಷಗಳಿಂದ ಗದ್ದಲ-ಸದನ ಕೋಲಾಹಲ
- ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ

**ಬೆಂಗಳೂರು:** ವಿರೋಧ ಪಕ್ಷ ಬಿಜೆಪಿಯ ತೀವ್ರ ವಿರೋಧದ ನಡುವೆಯೂ ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ ವಿಬಿ-ಜಿ ರಾಮ್ ಜಿ ಕಾಯ್ದೆಯನ್ನು ತಕ್ಷಣವೇ ರದ್ದುಗೊಳಿಸುವಂತೆ ಮತ್ತು ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮನರೇಗಾವನ್ನು ಮರು ಜಾರಿಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಿದೆ.

ವಿಧಾನಸಭೆ ಅಧಿವೇಶನದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಬಿ-ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ನಿರ್ಣಯ ಮಂಡನೆ ವೇಳೆ, ವಿಪಕ್ಷ ಸದಸ್ಯರು ಖಂಡಿಸಿದ್ದರಿಂದ ಸದನದಲ್ಲಿ ತೀವ್ರ ಗದ್ದಲ, ವಾಕ್ಸಮರಕ್ಕೆ ದಾರಿ ಮಾಡಿಕೊಟ್ಟಿತ್ತು. ವಿಪಕ್ಷಗಳ ಸದಸ್ಯರು ಎದ್ದು ನಿಂತು ಅಡ್ಡಿ ಪಡಿಸಿದರು. ಈ ವೇಳೆ ವಿಪಕ್ಷಗಳ ಮೇಲೆ ಸಿದ್ದರಾಮಯ್ಯ ಅವರು ಗರಂ ಆಗಿ, ಅಧ್ಯಕ್ಷರೇ ಅವರನ್ನ ಕೂರಿಸಿ, ಯಾರು ನಿಮ್ಮ ಮಾತು ಕೇಳುವುದಿಲ್ಲವೋ ಅವರನ್ನು ಹೊರಗೆ ಹಾಕಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾತು ಮುಂದುವರೆಸಿದ ಸಿದ್ದರಾಮಯ್ಯ ಅವರು, ಕರ್ನಾಟಕದ ಗ್ರಾಮೀಣ ಜನರ ಬದುಕುವ ಹಕ್ಕನ್ನು ರಕ್ಷಿಸುವ ದೃಷ್ಟಿಯಿಂದ, ಈ ಸದನವು ಕೇಂದ್ರ ಸರ್ಕಾರವನ್ನು ತಕ್ಷಣವೇ ವಿಬಿ-ಜಿ ರಾಮ್ ಜಿ ಕಾಯ್ದೆಯನ್ನು ರದ್ದುಗೊಳಿಸಬೇಕು. ಈ ಕಾಯ್ದೆ ಫೆಡರಲ್ ತತ್ವಕ್ಕೆ ವಿರುದ್ಧವಾಗಿದೆ. ರಾಜ್ಯ ಖಜಾನೆಗೆ ತೀವ್ರ ಹೊರೆಯಾಗಿದೆ ಮತ್ತು ವಿಕೇಂದ್ರೀಕರಣದ ತತ್ವಕ್ಕೆ ವಿರುದ್ಧವಾಗಿದೆ. ಗ್ರಾಮ ಪಂಚಾಯಿತಿಗಳ ಅಧಿಕಾರ ಮತ್ತು ಹಕ್ಕುಗಳನ್ನು ಕಸಿದುಕೊಂಡಿದೆ. ಹೀಗಾಗಿ ಈ ಕಾಯ್ದೆಯನ್ನು ತಕ್ಷಣವೇ ರದ್ದುಗೊಳಿಸಬೇಕೆಂದು ಆಗ್ರಹಿಸಿದರು.



ಗ್ರಾಮೀಣ ಆಸ್ತಿ ಸೃಜನೆಗೆ ಮತ್ತು ಬಡವರ ಸ್ವಾವಲಂಬನೆಗೆ ಕಾರಣವಾಗಿದ್ದ ಮನರೇಗಾ ಕಾಯ್ದೆಯನ್ನು ಈ ಹಿಂದಿನಂತೆ ಅದರ ಮೂಲ ಸ್ವರೂಪದಲ್ಲಿಯೇ ಮರುಸ್ಥಾಪಿಸಬೇಕು. ಭಾರತೀಯ ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿರುವ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಅಧಿಕಾರ ವಿಕೇಂದ್ರೀಕರಣದ ತತ್ವಗಳಿಗೆ ವಿಧಾನಸಭೆಯು ತನ್ನ ಸಂಪೂರ್ಣ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಗ್ರಾಮೀಣ ಬಡವರಿಗೆ ಸಂಜೀವಿನಿ ಮತ್ತು ಗ್ರಾಮೀಣ ಜೀವನದ ಅವಿಭಾಜ್ಯ ಅಂಗವಾಗಿದ್ದ

» ನಾಲ್ಕನೇ ಪುಟದಲ್ಲಿ

> **ವಿಬಿ-ಜಿ ರಾಮ್ ಜಿ ಕಾಯ್ದೆ ಜಾರಿಗೆ ತರುವ ಮುನ್ನ ರಾಜ್ಯಗಳೊಂದಿಗೆ ಚರ್ಚೆಯಾಗಿಲ್ಲ. 60:40 ಅನುದಾನದ ಅನುಪಾತ ತರುವ ಮುನ್ನ ಚರ್ಚೆಯಾಗಬೇಕಿತ್ತು. ಮಹಾತ್ಮಾ ಗಾಂಧಿ ಹೆಸರು ತೆಗೆದುಹಾಕಿ ಅವರಿಗೆ ಪುನಃ ಅವಮಾನ ಮಾಡಬಾರದು. ಈ ಬಗ್ಗೆ ಕೇಂದ್ರ ಸರ್ಕಾರ ಹಾಗು ರಾಷ್ಟ್ರಪತಿಗೆ ಮನವಿ ಕಳುಹಿಸಿಕೊಡಲಾಗುವುದು.**
> **-ಸಿದ್ದರಾಮಯ್ಯ, ಮುಖ್ಯಮಂತ್ರಿ**

## ಹಂತ-ಹಂತವಾಗಿ ಯಗಚಿ ಎಡದಂಡೆ ನಾಲೆಗೆ ಭೂಸ್ವಾಧೀನ

### ಶಾಸಕ ಸಿಮೆಂಟ್ ಮಂಜು ಪ್ರಶ್ನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉತ್ತರ

• ಪ್ರಜೋದಯ ವರದಿ

**ಬೆಂಗಳೂರು:** ಅನುದಾನ ಲಭ್ಯತೆ ಅನುಸಾರ ಯಗಚಿ ಎಡದಂಡೆ ನಾಲೆಗಳ ಭೂಸ್ವಾಧೀನ ಪ್ರಕ್ರಿಯೆಯನ್ನು ಹಂತ ಹಂತವಾಗಿ ಮಾಡಲಾಗುವುದೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ವಿಧಾನಸಭೆ ಗಮನ ಸೆಳೆಯುವ ಸೂಚನೆ ವೇಳೆ ಬಿಜೆಪಿ ಶಾಸಕ ಸಿಮೆಂಟ್ ಮಂಜು ಅವರು, ಯಗಚಿ ಜಲಾಶಯದ ಎಡದಂಡೆ ನಾಲೆಗಳ ಲ್ಯಾಟರಲ್, ಮೈನರ್‌ಗಳು ಹಾಗು ಮೊಸಳೆ ಶಾಖಾ ನಾಲೆಯ ಭೂಸ್ವಾಧೀನ ಕೈಗೊಳ್ಳದಿರುವ ಬಗ್ಗೆ ಪ್ರಸ್ತಾಪ ಮಾಡಿದ ವೇಳೆ ಡಿ.ಕೆ. ಶಿವಕುಮಾರ್ ಅವರು ಉತ್ತರ ನೀಡಿದರು.

ಬೇಲೂರು, ಹಾಸನ, ಆಲೂರು ತಾಲ್ಲೂಕುಗಳ 37 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಹಿಂಗಾರು ಬೆಳೆಗಳಿಗೆ ನೀರಾವರಿ ಕಲ್ಪಿಸಲು ಯಗಚಿ ಎಡದಂಡೆ ಯೋಜನೆ ಮಾಡಲಾಗಿದೆ. ಯಗಚಿ ಮುಖ್ಯ ನಾಲೆಯ 54 ರಿಂದ 84ರ ವ್ಯಾಪ್ತಿಯಲ್ಲಿ 12,427 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, 262 ಎಕರೆ 28 ಗುಂಟೆ ಜಮೀನು ಭೂಸ್ವಾಧೀನವಾಗಿದ್ದು, ಭೂಮಾಲೀಕರಿಗೆ ಪರಿಹಾರ ನೀಡಲಾಗಿದೆ.



ಯಗಚಿ ಎಡದಂಡೆ ಮುಖ್ಯ ನಾಲೆ ಮತ್ತು ವಿತರಣ ನಾಲೆ ಸಂಖ್ಯೆ 71ರಿಂದ 84ರವರೆಗೆ ಹಾಗು ಮೊಸಳೆ ನಾಲೆಗಳಿಗೆ ಸಂಬಂಧಿಸಿದಂತೆ ಒಟ್ಟು 286 ಎಕರೆ 22.5 ಗುಂಟೆ ಜಮೀನುಗಳಿಗೆ ಭೂಪರಿಹಾರ ನೀಡಲು 60 ಕೋಟಿಗಳಷ್ಟು ಅನುದಾನ ಅಗತ್ಯವಿದ್ದು, ಅನುದಾನ ಲಭ್ಯತೆ ಅನುಗುಣವಾಗಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಶಾಸಕ ಹೆಚ್.ಡಿ.ರೇವಣ್ಣ ಅವರು ಮಾತನಾಡಿ, ಈ ನಾಲೆಯಲ್ಲಿ ಆರಂಭಿಕ 5 ಕಿ.ಮೀವರೆಗೂ ನಾಲೆ ಆಗಿಲ್ಲ ಆದಷ್ಟು ಬೇಗ ಅನುದಾನ ಕೊಡಿಸಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಮನವಿ ಮಾಡಿದರು. ಪ್ರತಿಕ್ರಿಯೆ ನೀಡಿದ ಡಿ.ಕೆ. ಶಿವಕುಮಾರ್ ಅವರು, ಈ ಭೂಸ್ವಾಧೀನ ಪ್ರಕ್ರಿಯೆ ಶುರುವಾಗಿದ್ದು, ಯಾವಾಗ, ಸಿಮೆಂಟ್ ಮಂಜು ಅವರ ಮನವಿ ಆದ್ಯತೆ ಮೇರೆಗೆ ಕೈಗೊಳ್ಳುತ್ತೇವೆ. ರೇವಣ್ಣ ಅವರು ಐದಾರು ಬಾರಿ ಶಾಸಕರಾಗಿ, ಮಂತ್ರಿಯಾಗಿದ್ದಾರೆ. ಅವರ ತಂದೆ ನೀರಾವರಿ ಸಚಿವರಾಗಿದ್ದರು, ಪಿಡಬ್ಲ್ಯೂಡಿ ಸಚಿವರಾಗಿದ್ದರು. ಅವರು ಇಡೀ ಜಿಲ್ಲೆ ನಡೆಸಿದ್ದಾರೆ. ಮಂಜು ಅವರು ಹೊಸದಾಗಿ ಬಂದಿದ್ದು, ಅವರ ಧ್ವನಿಗೆ ನಾನು ಬೆಂಬಲ ನೀಡುತ್ತೇನೆಂದು ತಿಳಿಸಿದರು.

## ಗೂಡಂಗಡಿಗಳ ತೆರವಿಗೆ ಐದು ದಿನಗಳ ಗಡುವು

• ಪ್ರಜೋದಯ ವರದಿ

**ಹಾಸನ:** ನಗರದ ಕಟ್ಟಿನಕೆರೆ ಮಾರು ಕಟ್ಟೆ ಸುತ್ತಮುತ್ತ ರಸ್ತೆ ಆಕ್ರಮಿಸಿಕೊಂಡು ನಿರ್ಮಾಣವಾಗಿದ್ದ ಅಕ್ರಮ ಗೂಡಂಗಡಿಗಳನ್ನು ತೆರವುಗೊಳಿಸಲು ಐದು ದಿನಗಳ ಗಡುವು ನೀಡಲಾಗಿದೆ.

ಗೂಡಂಗಡಿಗಳಿಂದ ಸಂಚಾರ ಸಮಸ್ಯೆ, ಸ್ವಚ್ಛತೆ ಇಲ್ಲದಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನಲೆ ಮಂಗಳವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿದ ಮಹಾನಗರ ಪಾಲಿಕೆ ಅಧಿಕಾರಿಗಳು, ಸಾರ್ವಜನಿಕರ ಹಿತದೃಷ್ಟಿಯಿಂದ 5 ದಿನಗಳ ಗಡುವು ನೀಡಿದರು.

ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸಂಚಾರ ದಟ್ಟಣೆ, ಪಾದಚಾರಿಗಳಿಗೆ ಅಡಚಣೆ ಹಾಗು ಸ್ವಚ್ಛತೆ ಸಮಸ್ಯೆ ಹಿನ್ನಲೆ ರಸ್ತೆ ಬದಿ ಅಕ್ರಮವಾಗಿ ನಿರ್ಮಿಸಿದ್ದ ಗೂಡಂಗಡಿಗಳನ್ನು ತೆರವುಗೊಳಿಸುವಂತೆ ಪರಿಸರ



ಇಂಜಿನೀಯರ್ ಕೆ.ಆರ್.ಕವಿತಾ ಹಾಗು ಇತರರು ಸೂಚನೆ ನೀಡಿದರು.

ವ್ಯಾಪಾರಸ್ಥರೊಂದಿಗೆ ಮಾತುಕತೆ ನಡೆಸಿ, ಈ ಮೊದಲೇ ಗಡುವು ನೀಡಲಾಗಿತ್ತು. ಇದೀಗ ಮತ್ತೆ 5 ದಿನ ವಿಸ್ತರಿಸಲಾಗಿದೆ. ಅಷ್ಟರೊಳಗೆ ಸಮಸ್ಯೆ ಸರಿಪಡಿಸಬೇಕು. ಸ್ವಯಂಪ್ರೇರಿತವಾಗಿ ಅಂಗಡಿ ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು. ವ್ಯಾಪಾರಸ್ಥರು ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಈಗಾಗಲೇ ಮಾನವೀಯ ದೃಷ್ಟಿಯಿಂದ ಕಾಲಾವಕಾಶ ನೀಡಲಾಗಿದೆ ಎಂದರು.

ನಗರದ ಪ್ರಮುಖ ವ್ಯಾಪಾರ ಕೇಂದ್ರವಾಗಿರುವ ಕಟ್ಟಿನಕೆರೆ ಮಾರು ಕಟ್ಟೆ ರಸ್ತೆ ಸಂಪೂರ್ಣವಾಗಿ ಮುಕ್ತವಾಗುವುದರಿಂದ ಸಂಚಾರ ಸುಗಮವಾಗಲಿದೆ. ಸ್ವಚ್ಛತೆ ಹಾಗು ಸಾರ್ವಜನಿಕ ಸುರಕ್ಷತೆ ಹೆಚ್ಚಲಿದೆ ಎಂದು ಅಧಿಕಾರಿಗಳು ಹೇಳಿದರೆ, ಕ್ರಮಕ್ಕೆ ಕೆಲ ವ್ಯಾಪಾರಸ್ಥರು ಅಸಮಾಧಾನ ವ್ಯಕ್ತಪಡಿಸಿದರು. ಹಿರಿಯ ಆರೋಗ್ಯ ನಿರೀಕ್ಷಕ ಆದಿಶ್ ಕುಮಾರ್, ಶಶಿರಾಜ್ ಅರಸ್, ಆನಂದ್, ದೀಪಕ್, ಚೇತನ್, ಪಾಲಿಕೆ ಸಿಬ್ಬಂದಿ ಹಾಗೂ ಸೂಪರ್ ವೈಸರ್‌ಗಳಾದ ಪರಶುರಾಮ್, ಎಚ್.ಜೆ. ರಾಮು, ವೆಂಕಟೇಶ್, ಸಂತೋಷ್, ಗಿರೀಶ್, ಸಂದೀಪ, ಮಂಜುನಾಥ್, ರವಿ ಕುಮಾರ್ ಇದ್ದರು.

## ಮರು ಕ್ರಿಯಾ ಯೋಜನೆಯಿಂದ ಅಭಿವೃದ್ಧಿ ಕುಂಠಿತ

### ಬೇಲೂರು ಪುರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸದಸ್ಯರ ಅಸಮಾಧಾನ

• ಪ್ರಜೋದಯ ವರದಿ

**ಬೇಲೂರು:** ಪುರಸಭೆ ವತಿಯಿಂದ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಾರ್ವಜನಿಕ ಸಭೆಯಲ್ಲಿ ಮರು ಕ್ರಿಯಾ ಯೋಜನೆಯಿಂದ ಪಟ್ಟಣದ ವಿವಿಧ ವಾರ್ಡ್‌ಗಳ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಹಾಗು ಹಾಲಿ ಸದಸ್ಯ ಜಿ. ಶಾಂತಕುಮಾರ್ ಸೇರಿ ಹಲವು ಸದಸ್ಯರು ಪುರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರ ಅಧ್ಯಕ್ಷತೆಯಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ನೇತೃತ್ವದಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಶಾಸಕರು, ಪಟ್ಟಣದ ಅಭಿವೃದ್ಧಿಗೆ 23 ವಾರ್ಡ್‌ಗಳ ಸದಸ್ಯರ ಸಹಕಾರ ಅಗತ್ಯ. ಯಾರ ಸಹಕಾರ



ಇಲ್ಲದೆ ನಗರಾಭಿವೃದ್ಧಿ ಸಾಧ್ಯವಿಲ್ಲ ಎಂದು ನಾನು ಈಗಾಗಲೇ ಸಾಮಾನ್ಯ ಸಭೆಯಲ್ಲಿ ಹೇಳಿದ್ದೇನೆ ಎಂದರು.

ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ತಾರತಮ್ಯ ಮಾಡಿಲ್ಲ. 23 ವಾರ್ಡ್‌ಗಳ ಸದಸ್ಯರ ಅನುಮತಿಯಂತೆ 7.5 ಕೋ.ರೂ. ಅನುದಾನದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಇದರಲ್ಲಿ ರಾಜಕೀಯ ಬೇಡ. ಮುಂದಿನ ದಿನಗಳಲ್ಲಿ 23 ವಾರ್ಡ್‌ಗಳ ಸದಸ್ಯರೊಂದಿಗೆ ಪ್ರತಿಯೊಂದು ವಾರ್ಡ್‌ಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ತಿಳಿದು ಅಭಿವೃದ್ಧಿ ಪಡಿಸುವೆ. ಬಿಕ್ಕೋಡು ರಸ್ತೆ ವಿಸ್ತರಣೆಯಲ್ಲಿ ಒಂದು ಇಂಚಿನ ವ್ಯತ್ಯಾಸವಿದ್ದರೂ ಕಾಮಗಾರಿ ಕಿತ್ತು ಹೊಸದಾಗಿ ನಿರ್ಮಿಸಲಾಗುವುದು. ಇಲ್ಲಿ ಯಾರು ಎಷ್ಟೇ ಬಲಾಢ್ಯರಾಗಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವಂತೆ ಇಂಜಿನೀಯರ್‌ಗೆ ಎಚ್ಚರುಜೆ ನೀಡಿ, ಕಾಮಗಾರಿ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಮಸ್ಯೆ ಬಗೆಹರಿಸುವಂತೆ ತಾಕೀತು ಮಾಡಿದರು.

ಸಭೆಯಲ್ಲಿ ಮಾತನಾಡಿದ ಸದಸ್ಯ ಜಿ.ಶಾಂತಕುಮಾರ್ ಅವರು, 2018-19ನೇ ಸಾಲಿನಲ್ಲಿ ಬಂದಿದ್ದ 7.5 ಕೋ.ರೂ. ಎಸ್‌ಎಫ್‌ಸಿ ಅನುದಾನದಲ್ಲಿ ರೂಪಿಸಿದ್ದ ಕಾಮಗಾರಿಗಳು ಸರ್ಕಾರಕ್ಕೆ ಹಣ ವಾಪಾಸ್ ಹೋದ ಕಾರಣ ಅರ್ಧಕ್ಕೆ ನಿಂತಿವೆ. ಈಗ ಮರು ಕ್ರಿಯಾಯೋಜನೆ ರೂಪಿಸುವಾಗ 23 ವಾರ್ಡ್‌ಗಳ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ಕೇವಲ ಮೂರು-

» ನಾಲ್ಕನೇ ಪುಟದಲ್ಲಿ

> **ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಂಘ-ಸಂಸ್ಥೆಗಳ ಮುಖಂಡರು ಮತ್ತು ಸಾರ್ವಜನಿಕರು ನೀಡಿದ ಸಲಹೆಗಳನ್ನು ಪರಿಗಣಿಸಿ, ಪುರಸಭೆಗೆ ಲಭ್ಯವಾಗುವ ಅನುದಾನದ ಮಿತಿಯಲ್ಲಿ ಪಟ್ಟಣದ 23 ವಾರ್ಡ್‌ಗಳಲ್ಲಿ ಪ್ರಾಮಾಣಿಕವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಇದಕ್ಕೆ ಎಲ್ಲರ ಸಹಕಾರ ಅತ್ಯವಶ್ಯಕ.**
> **- ಉಷಾ ಸತೀಶ್, ಪುರಸಭೆ ಅಧ್ಯಕ್ಷೆ**

## ವಿದ್ಯಾರ್ಥಿಗಳು ಪರೀಕ್ಷಾ ಭಯದಿಂದ ಹೊರ ಬನ್ನಿ

### ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮೇಘನಾ ಸಲಹೆ

• ಪ್ರಜೋದಯ ವರದಿ

**ಅರಕಲಗೂಡು :** ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂಬುದು ಯುದ್ಧ ಭೂಮಿಯಲ್ಲ. ಅದೊಂದು ಪವಿತ್ರ ಭೂಮಿ. ಭಯವನ್ನು ಮನಸ್ಸಿನಿಂದ ಹೋಗಲಾಡಿಸಿ ಸಂಭ್ರಮದಿಂದ ಪರೀಕ್ಷೆಯನ್ನು ಬರೆದು ಯಶಸ್ಸು ಸಾಧಿಸಿ ಎಂದು ಬೆಂಗಳೂರು ಡಿಡಿ ಚಂದನ ವಾಹಿನಿಯ ಸಹಾಯಕ ನಿರ್ದೇಶಕಿ ಕೆ.ಟಿ.ಮೇಘನಾ ಅವರು ತಿಳಿಸಿದರು.

ಪಟ್ಟಣದ ಲಕ್ಷ್ಮೀ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ ಬಿಜಿಎಸ್ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಅಧ್ಯಯನ ಮಾಡುವ



ಪ್ರತಿ ಶಿಕ್ಷಣವೂ ಕೂಡ ಬದುಕಿನ ದೊಡ್ಡ ಬದಲಾವಣೆಯ ಹಂತವಾಗಿರುತ್ತದೆ. ಹಾಗಾಗಿ ಪ್ರತಿಕ್ಷಣವೂ ಕೂಡ ಮೈಮರೆಯಬಾರದು. ಮುಂದಿನ ಶಿಕ್ಷಣ ಮತ್ತು ಉದ್ಯೋಗವನ್ನು ಪಡೆಯುವ ನಿಟ್ಟಿನಲ್ಲಿ ಶಿಕ್ಷಣವನ್ನು ಮುಗಿಸಬೇಕು. ಕೇವಲ ಅಂಕಗಳಿಕೆಯೇ ಮುಂದಿನ ಉತ್ತಮ ಭವಿಷ್ಯವನ್ನು ನಿರ್ಧರಿಸಲಾಗದು. ಮಾನಸಿಕ ಭೌದ್ಧಿಕ ಮಟ್ಟವನ್ನು ವೃದ್ಧಿಸಿಕೊಂಡು ಶೈಕ್ಷಣಿಕ ಸಾಲಿನಲ್ಲಿ ಕೇಳಿದ, ಓದಿದ ಪಾಠವನ್ನು ಅವಲೋಕನ ಮಾಡಿಕೊಂಡು ಪ್ರಶ್ನೆಯನ್ನು ಎರಡು ಬಾರಿ ಓದಿ ಪರೀಕ್ಷೆಯನ್ನು ಎದುರಿಸಿ ಎಂದು ಕಿವಿ ಮಾತು ಹೇಳಿದರು.

ಬರಿಗಾಲಿನಲ್ಲಿ ಬೆಟ್ಟವನ್ನು ಹತ್ತುವಾಗ ಕಲ್ಲು ಮುಳ್ಳು ಚುಚ್ಚುತ್ತವೆ. ಆದರೂ ಬೆಟ್ಟಹತ್ತಿ ಸೂರ್ಯೋದಯವನ್ನು ನೋಡಿದಾಗ ಖುಷಿಯಾಗುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಶ್ರಮಪಟ್ಟು ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಅನ್ಕೊಂಡ ಕೋರ್ಸ್‌ನಲ್ಲಿ ಸೀಟು ಸಿಕ್ಕರೆ ತುಂಬಾ ಖುಷಿಯಾಗುತ್ತದೆ. ನನಗೆ ಆಗಲ್ಲವೆಂದು ಕೈಕಟ್ಟಿ ಕುಳಿತುಕೊಳ್ಳದೆ ಶ್ರಮಪಟ್ಟು ವ್ಯಾಸಂಗ ಮಾಡಬೇಕು. ಆಗ ಮಾತ್ರ ಯಶಸ್ಸು ಸಾಧ್ಯ ಎಂದರು.

ಅಬ್ದುಲ್ ಕಲಾಂ ಅವರು ಪೈಲೆಟ್ ಆಗಬೇಕೆಂದು ಕನಸ್ಸು ಕಂಡಿದ್ದರು. ಅದಕ್ಕಾಗಿ ಡೆಹರಡೂನ್‌ನಲ್ಲಿ ಏರ್‌ಫೋರ್ಸ್ ಪರೀಕ್ಷೆಗೆ ಹೋಗುತ್ತಾರೆ. 8 ಹುದ್ದೆಗೆ 25 ಜನ ಬಂದಿರುತ್ತಾರೆ. ಕಲಾಂ ಅವರು 9 ನೇ

» ನಾಲ್ಕನೇ ಪುಟದಲ್ಲಿ

## ಅನುಮಾನಾಸ್ಪದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ

• ಪ್ರಜೋದಯ ವರದಿ

**ಸಕಲೇಶಪುರ :** ಪಟ್ಟಣದ ತೇಜಸ್ವಿ ವೃತ್ತ ಸಮೀಪದ ಖಾಸಗಿ ಶಾಲೆಯ ಆಟದ ಮೈದಾನದಲ್ಲಿ ಯುವಕನೊಬ್ಬ ಅನುಮಾನಾಸ್ಪದ ಸ್ಥಿತಿಯಲ್ಲಿ ಮೃತಪಟ್ಟಿರುವ ಘಟನೆ ಮಂಗಳವಾರ ಬೆಳಕಿಗೆ ಬಂದಿದೆ. ಮೃತ ಯುವಕನನ್ನು ಮಠಸಾಗರ ಗ್ರಾಮದ ಜೀವನ್ (30) ಎಂದು ಗುರುತಿಸಲಾಗಿದೆ.



ಸ್ಥಳೀಯರು ಆಟದ ಮೈದಾನದಲ್ಲಿ ಜೀವನ್ ಶವ ಬಿದ್ದಿರುವುದನ್ನು ಗಮನಿಸಿ ಮಾಹಿತಿ ನೀಡಿದರು. ಘಟನಾ ಸ್ಥಳವನ್ನು ಪೊಲೀಸರು, ಸೋಕೋ ತಂಡ ಮಹಜರು ನಡೆಸಿದರು.

ಮೃತ ಯುವಕನ ಬೈಕ್ ಹೇಮಗಂಗಾ ಸರ್ವಿಸ್ ಸ್ಟೇಷನ್ ಬಳಿ ನಿಂತಿರುವುದು ಪತ್ತೆಯಾಗಿದ್ದು, ಸಾವಿನ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಸಾವಿಗೆ ಕಾರಣ ಏನೆಂಬುದು ಸ್ಪಷ್ಟವಾಗಿಲ್ಲ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಾವಿನ ನಿಖರ ಕಾರಣ ಪತ್ತೆಹಚ್ಚಲು ತನಿಖೆ ಮುಂದುವರೆಸಿದ್ದಾರೆ.

## ತಂಬಾಕಿಗೆ ಅಬಕಾರಿ ಸುಂಕ ವಾಪಾಸ್: ಹೆಚ್.ಡಿ.ಕೆ. ಪ್ರಯತ್ನದ ಫಲ

### ಕೇಂದ್ರ ಸರ್ಕಾರದ ಮಹತ್ವದ ನಿರ್ಧಾರ | ರಾಜ್ಯದ ಬೆಳೆಗಾರರು ನಿರಾಳ

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ಅವರ ಪ್ರಯತ್ನದ ಫಲವಾಗಿ ಎಫ್‌ಸಿವಿ ತಂಬಾಕು ಮೇಲೆ ವಿಧಿಸಲಾಗಿದ್ದ ಶೇ.18ರಷ್ಟು ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರ ತೆಗೆದು ಹಾಕಿದೆ.



ಈ ತಂಬಾಕಿನ ಮೇಲೆ ಶೇ.18ರಷ್ಟು ಅಬಕಾರಿ ಸುಂಕ ವಿಧಿಸಿದ್ದರಿಂದ ಖರೀದಿದಾರರು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೆ ದೂರವೇ ಉಳಿದಿದ್ದರು. ಅದರಿಂದ ಬೆಳೆದ ಬೆಳೆ ಮಾರಾಟವಾಗದೆ ರಾಜ್ಯದ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಅರಕಲಗೂಡು ಸೇರಿ ವಿವಿಧ ಭಾಗಗಳಲ್ಲಿನ ತಂಬಾಕು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು.

ಬೆಳೆಗಾರರು ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ತಮ್ಮ ಸಂಕಷ್ಟ ತೋಡಿಕೊಂಡಿದ್ದರು. ಈ ಸಂಬಂಧ ಸಚಿವರು ಬೆಂಗಳೂರಿನ ತಂಬಾಕು ಮಂಡಳಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ವಿಶಾಖಪಟ್ಟಣ ವಿಭಾಗದ ಕೇಂದ್ರೀಯ ಅಬಕಾರಿ ಮತ್ತು ಜಿಎಸ್ಟಿ ಮುಖ್ಯ ಆಯುಕ್ತರ ಜೊತೆ ನಡೆಸಲಾಗಿದ್ದ ಪತ್ರ ವ್ಯವಹಾರಗಳ ಕುರಿತ ಎಲ್ಲಾ ಮಾಹಿತಿಯನ್ನೂ ಪಡೆದುಕೊಂಡಿದ್ದರು.

ನಂತರ ಸಚಿವರು ಈ ವಿಷಯವನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ

» 2ನೇ ಪುಟದಲ್ಲಿ

> **ನನ್ನ ಮನವಿಗೆ ಸ್ಪಂದಿಸಿದ ವಿತ್ತ ಸಚಿವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಹರಾಜು ಪ್ರಕ್ರಿಯೆ ಆರಂಭವಾಗಿ ತಂಬಾಕು ಬೆಳೆಗಾರರಿಗೆ ಅನುಕೂಲ ಆಗುತ್ತಿರುವುದು ಸಂತೋಷದ ಸಂಗತಿ. ನರೇಂದ್ರ ಮೋದಿ ಅವರ ಸರ್ಕಾರ ಸದಾ ರೈತಪರ ಎನ್ನುವುದಕ್ಕೆ ಈ ಕ್ರಮವು ಉತ್ತಮ ಉದಾಹರಣೆ ಆಗಿದೆ.**
> **-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

## ಮಕ್ಕಳಿಗೆ ಪಠ್ಯ ಪುಸ್ತಕ ಜೊತೆಗೆ ಉಚಿತ ನೋಟ್ ಬುಕ್

• ಪ್ರಜೋದಯ ವರದಿ

**ಬೆಂಗಳೂರು:** ಸರ್ಕಾರಿ ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ಮಾತ್ರ ಕೊಡುತ್ತಿದ್ದ ರಾಜ್ಯ ಸರ್ಕಾರ ಇನ್ನು ಮುಂದೆ 1 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಸಹ ವಿತರಿಸುವ ಮಹತ್ವದ ನಿರ್ಧಾರ ಘೋಷಿಸಿದೆ.

2026-27ನೇ ಸಾಲಿನಿಂದ ಈ ನಿಯಮ ಜಾರಿಗೆ ಬರಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ ಶುಭಮಂಗಳಾ ಅವರು ಆದೇಶ ಹೊರಡಿಸಿದ್ದಾರೆ. ಅದರಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಸುಮಾರು 61 ಲಕ್ಷ ಮಕ್ಕಳಿಗೆ ಅನುಕೂಲವಾಗಲಿದೆ. ಈ ಮೂಲಕ ಮೊದಲ ಬಾರಿಗೆ 1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕದ ಜೊತೆಗೆ ನೋಟ್‌ಬುಕ್ ವಿತರಣೆಗೆ ಮುಂದಾಗಿದೆ.

**ಪ್ರಸ್ತಾವನೆ ಸಲ್ಲಿಸಿದ್ದ ಶಿಕ್ಷಣ ಇಲಾಖೆ**

ಸರ್ಕಾರಿ ಹಾಗು ಅನುದಾನಿತ ಶಾಲೆಗಳ 1ರಿಂದ 10ನೇ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಅಭ್ಯಾಸ ಪುಸ್ತಕ ಹಾಗು 1ರಿಂದ 12ನೇ ತರಗತಿವರೆಗೆ ದಿನಚರಿ ಪುಸ್ತಕ ವಿತರಣೆ ಸಂಬಂಧ ಶಿಕ್ಷಣ ಇಲಾಖೆಯು



ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಸರ್ಕಾರ ಒಪ್ಪಿಗೆ ಸೂಚಿಸಿದ್ದು, 290.46 ಕೋಟಿ ರೂ. ಅನುದಾನವನ್ನು ಶಾಲಾ ಶಿಕ್ಷಣ ಇಲಾಖೆಗೆ ನೀಡಲು ಒಪ್ಪಿದೆ. ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲೇ ಮಕ್ಕಳಿಗೆ ಪಠ್ಯಪುಸ್ತಕ ವಿತರಿಸಲು ತಯಾರಿಗೆ ಶುಭಮಂಗಳ ಸೂಚಿಸಿದ್ದಾರೆ.

**ಪೋಷಕರ ಹೊರೆ ಇಳಿಸಿದ ಸರ್ಕಾರ**

1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಸರ್ಕಾರದ ಕಡೆಯಿಂದಲೇ ಪಠ್ಯ ಪುಸ್ತಕ ಹಾಗೂ ನೋಟ್ ಬುಕ್ ಉಚಿತವಾಗಿ ನೀಡುವುದರಿಂದ ಪೋಷಕರ ಹೊರೆ ತಪ್ಪಲಿದೆ. 1ರಿಂದ 10ನೇ ತರಗತಿ ಮಕ್ಕಳಿಗೆ ಶಾಲೆಯಲ್ಲಿ ಪಠ್ಯ ಪುಸ್ತಕ ನೀಡಲಾಗುತ್ತಿತ್ತಾದರೂ ಪೋಷಕರು ನೋಟ್ ಬುಕ್ ಕೊಡಿಸಬೇಕಿತ್ತು. ಇನ್ನೂ 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೂ ಸಹ ಪುಸ್ತಕ ನೀಡುತ್ತಿರುವುದರಿಂದ ಪೋಷಕರ ಹೊರೆ ಕಡಿಮೆಯಾಗಲಿದೆ.

### ಆಡಳಿತ ನಿರ್ವಹಣೆ ಅಧಿಕಾರಗಳ ಕೈವಶ | ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗೆ ಸೂಚನೆ

# ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಮುಕ್ತಾಯ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸೇರಿ ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರ ಅಧಿಕಾರಾವಧಿ ಸೋಮವಾರಕ್ಕೆ ಮುಕ್ತಾಯಗೊಂಡಿದೆ. ಮಂಗಳವಾರದಿಂದ ಗ್ರಾಮ ಪಂಚಾಯಿತಿಗಳ ಆಡಳಿತ ನಿರ್ವಹಣೆ ಅಧಿಕಾರಗಳ ಕೈವಶವಾಗಿದೆ.

ಕಳೆದ ಗ್ರಾಮ ಪಂಚಾಯಿತಿ ಚುನಾವಣೆ 2020 ಡಿಸೆಂಬರ್‌ನಲ್ಲಿ ನಡೆದರೂ ಚುನಾಯಿತ ಸದಸ್ಯರು ಸೇರಿದ ಪ್ರಥಮ ಸಭೆಯಿಂದ ಅಧಿಕಾರಾವಧಿ ಪ್ರಾರಂಭವಾಗುತ್ತದೆ. ಆ ಪ್ರಕಾರ ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ 2021 ಫೆ.2 ರಂದು ಪ್ರಥಮ ಸಭೆ ನಡೆಸಲಾಗಿತ್ತು. ಈ ಅನ್ವಯ 2026 ಫೆ.2ಕ್ಕೆ ಸದಸ್ಯರ ಅಧಿಕಾರ ಅವಧಿ ಮುಕ್ತಾಯಗೊಂಡಿದೆ. ಇನ್ನು ಕೆಲ ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಏಪ್ರಿಲ್ ತಿಂಗಳಿಗೆ ಮುಕ್ತಾಯಗೊಳ್ಳಲಿದೆ. ಆದ್ದರಿಂದ ಗ್ರಾಮ ಪಂಚಾಯಿತಿ ಚುನಾವಣೆಗೆ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಸರ್ಕಾರ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಮುಕ್ತಾಯಗೊಳ್ಳುತ್ತಿರುವ ಹಿನ್ನಲೆಯಲ್ಲಿ ಎರಡು ವಾರದ ಹಿಂದೆಯೇ ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವಂತೆ





ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿತ್ತು. ಅದರಂತೆ ಜಿಲ್ಲಾಧಿಕಾರಿ ನಾಲ್ಕು ದಿನದ ಹಿಂದೆ ಆಡಳಿತಾಧಿಕಾರಿಗಳನ್ನು ನಿಯೋಜನೆ ಮಾಡಿ ಆದೇಶ ಹೊರಡಿಸಿದ್ದರು. ಆದೇಶದನ್ವಯ ನೇಮಕ ಗೊಂಡ ಆಡಳಿತಾಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ಮಂಗಳವಾರದಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗಿದ್ದಾರೆ. ಚುನಾವಣೆ ಮುಕ್ತಾಯಗೊಂಡು ಹೊಸ ಸದಸ್ಯರು ಆಯ್ಕೆಯಾಗುವವರೆಗೂ ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತಾಧಿಕಾರಿಗಳ ಕಾರ್ಯಭಾರ ಮುಂದುವರೆಯಲಿದೆ.

ಕಳೆದ ನಾಲ್ಕು ಮುಕ್ಕಾಲು ವರ್ಷದಿಂದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಯದೆ ಆಡಳಿತಾಧಿಕಾರಿಗಳ ದರ್ಬಾರ್ ನಡೆಯುತ್ತಿದೆ. ಕೆಲ ತಿಂಗಳ ಹಿಂದೆಯಷ್ಟೇ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳೂ ಆಡಳಿತಾಧಿಕಾರಿಗಳ ಕೈವಶವಾಗಿದ್ದವು. ಈಗ ಅದೇ ಸಾಲಿಗೆ ಗ್ರಾಮ ಪಂಚಾಯಿತಿಗಳು ಕೂಡ ಸೇರಿಕೊಂಡಿದೆ. ಈಗಲಾದರೂ ಸರ್ಕಾರ ಕೂಡಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

**ಚುನಾವಣಾ ಪೂರ್ವಸಿದ್ಧತೆಗೆ ಸೂಚನೆ**

2020-25ನೇ ಸಾಲಿನ ಗ್ರಾಮ ಪಂಚಾಯಿತಿಗಳ ಸದಸ್ಯರ ಅಧಿಕಾರಾವಧಿಯು 2026 ಜನವರಿ ತಿಂಗಳಿನಿಂದ ಪೂರ್ಣಗೊಳ್ಳಲು ಪ್ರಾರಂಭವಾಗಿದೆ. ಈ ಅವಧಿಯು ಮುಕ್ತಾಯಗೊಳ್ಳುವ ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ ನಡೆಸಬೇಕಾಗಿದೆ. ಚುನಾವಣೆ ನಡೆಸುವ 6 ತಿಂಗಳು ಮುಂಚಿತವಾಗಿ ಮತದಾರರ ಪಟ್ಟಿ ಮುದ್ರಣ ಒಳಗೊಂಡಂತೆ, ಇತರೆ ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಆಯೋಗವು ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ನಿಗದಿತ ಕಾಲಮಿತಿಯಲ್ಲಿ ಮೀಸಲಾತಿಯ ಅಧಿಸೂಚನೆಯನ್ನು ಹೊರಡಿಸಿ, ಅದರ ಪ್ರತಿಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ರಾಜ್ಯ ಚುನಾವಣಾ ಆಯೋಗದ ಆಯುಕ್ತರು ಕೇಳಿದ್ದಾರೆ.

ಈ ಹಿನ್ನಲೆ ಪ್ರಸ್ತುತ ಬಹುತೇಕ ಗ್ರಾಮ ಪಂಚಾಯಿತಿಗಳ ಅವಧಿಯು ಜನವರಿ-2026 ತಿಂಗಳಿನಿಂದ ಮಾರ್ಚ್-2026 ತಿಂಗಳವರೆಗೆ ಮುಕ್ತಾಯಗೊಳ್ಳುತ್ತಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ 2026-31ನೇ ಸಾಲಿನ ಗ್ರಾಮ ಪಂಚಾಯಿತಿಯ ಸಾರ್ವತ್ರಿಕ ಚುನಾವಣೆ ನಡೆಸಲು ಬೇಕಾಗಿರುವ ಎಲ್ಲಾ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ, ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಮತ್ತು ರಾಜ್ಯ ಚುನಾವಣೆ ಆಯೋಗಕ್ಕೆ ಸಲ್ಲಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

**ಮೂರು ಚುನಾವಣೆ ಒಟ್ಟಿಗೆ ನಡೆಸಲು ಚಿಂತನೆ**

ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮುಕ್ತಾಯಗೊಂಡಿರುವುದರಿಂದ ಗ್ರಾಮ ಪಂಚಾಯಿತಿ ಚುನಾವಣೆಯನ್ನೂ ಸೇರಿಸಿ ಒಂದು ಗ್ರಾಮ, ಒಂದು ಚುನಾವಣೆ ಚಿಂತನೆಯಡಿ ಮೂರು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಒಟ್ಟಿಗೆ ನಡೆಸಲು ಸರ್ಕಾರ ಚಿಂತನೆ ನಡೆಸಿದೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಕೂಡ ಕಡಿಮೆಯಾಗಲಿದೆ. ಆದರೆ, ಇದು ಸಾಧ್ಯವೇ ಎಂಬ ಪ್ರಶ್ನೆ ಕೂಡ ಎದ್ದಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮೀಸಲಾತಿ ಹಂಚಿಕೆ ಸೇರಿ ಹಲವು ಗೊಂದಲಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವುದರಿಂದ ಐದು ವರ್ಷ ಕಳೆಯುತ್ತಾ ಬಂದರೂ ಚುನಾವಣೆ ನಡೆದಿಲ್ಲ. ಅದೇ ಸ್ಥಿತಿ ಗ್ರಾಮ ಪಂಚಾಯಿತಿಗೂ ಬರಬಹುದೆಂಬ ಆತಂಕ ಎದುರಾಗಿದೆ. ಹೀಗಾಗಿ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಕೂಡಲೇ ನಡೆಸುವಂತೆ ಒತ್ತಾಯ ಕೇಳಿ ಬಂದಿದೆ.

> **2020 ಡಿಸೆಂಬರ್‌ನಲ್ಲಿ ನಡೆದಿದ್ದ ಚುನಾವಣೆ**
>
> ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಪೈಕಿ 5,698 ಗ್ರಾಮ ಪಂಚಾಯಿತಿಗಳಿಗೆ 2020 ಡಿಸೆಂಬರ್‌ನಲ್ಲಿ ಚುನಾವಣೆ ನಡೆದಿತ್ತು. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ 2021-22ರಲ್ಲಿ ನಡೆದಿದ್ದರಿಂದ, ಈ ಪಂಚಾಯಿತಿಗಳ ಚುನಾಯಿತ ಸದಸ್ಯರ ಅಧಿಕಾರಾವಧಿ 2026ರ ಫೆಬ್ರವರಿ ಮೊದಲ ವಾರಕ್ಕೆ ಕೊನೆಗೊಂಡಿದೆ. ಇದರೊಂದಿಗೆ, 2026ರ ಮಾರ್ಚ್‌ನಲ್ಲಿ ಅಧಿಕಾರಾವಧಿ ಮುಗಿಯಲಿರುವ 92 ಗ್ರಾಮ ಪಂಚಾಯಿತಿಗಳನ್ನೂ ಸೇರಿಸಿ ಒಟ್ಟಿಗೆ ಚುನಾವಣೆ ನಡೆಸಲು ಸರ್ಕಾರ ತಯಾರಿ ನಡೆಸಿದೆ

# ಗರ್ಭಾಶಯ ಕೊರಳ ಕ್ಯಾನ್ಸರ್ ಸ್ತ್ರೀ ಆರೋಗ್ಯದ ರಕ್ಷಣೆಗೆ ಮಹತ್ವದ ಹೆಜ್ಜೆ

**ಇಂದು ವಿಶ್ವ ಕ್ಯಾನ್ಸರ್ ದಿನಾಚರಣೆ**

– ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಸಂಘ, ಹಾಸನ

ಇದನ್ನು ಓದಲು 7–8 ನಿಮಿಷ ತೆಗೆದುಕೊಳ್ಳಬಹುದು. ಅಷ್ಟರೊಳಗೆ ಭಾರತದಲ್ಲಿ ಗರ್ಭಾಶಯ ಕ್ಯಾನ್ಸರ್‌ನಿಂದ ಒಬ್ಬ ಮಹಿಳೆ ಸಾವನ್ನಪ್ಪಿರಬಹುದು. ಆದ್ದರಿಂದ ಮಹಾಮಾರಿ ಗರ್ಭಾಶಯ ಕ್ಯಾನ್ಸರ್‌ನಿಂದ ನಮ್ಮನ್ನು ಹಾಗು ನಮ್ಮವರನ್ನು ರಕ್ಷಿಸಿಕೊಳ್ಳುವತ್ತ ದಿಟ್ಟ ಹೆಜ್ಜೆ ಇಡಬೇಕಿದೆ. ಗರ್ಭಾಶಯದ ಕೊರಳ ಕ್ಯಾನ್ಸರ್ ಭಾರತದಲ್ಲಿ ಮಹಿಳೆಯರಲ್ಲಿ ಹೆಚ್ಚು ಕಂಡು ಬರುವ ಕ್ಯಾನ್ಸರ್‌ಗಳಲ್ಲೊಂದು. ವಿಶೇಷವಾಗಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜಾಗೃತಿಯ ಕೊರತೆ, ಸಮಯಕ್ಕೆ ತಕ್ಕ ತಪಾಸಣೆಯ ಅಭಾವ ಮತ್ತು ಲಸಿಕೆ ಕುರಿತು ಮಾಹಿತಿ ಇಲ್ಲದಿರುವುದು ಈ ಕಾಯಿಲೆ ಹೆಚ್ಚಾಗಲು ಕಾರಣವಾಗಿದೆ.

ಆದರೆ, ಸಂತಸದ ಸಂಗತಿ ಏನೆಂದರೆ ಗರ್ಭಾಶಯದ ಕೊರಳ ಕ್ಯಾನ್ಸರ್ ತಡೆಯಲು ಸಾಧ್ಯವಿರುವ ಖಾಯಿಲೆಯಾಗಿದೆ. ಶರೀರದ ಕೆಲವು ಕೋಶಗಳು ನಿಯಂತ್ರಣವಿಲ್ಲದೆ ಬೆಳೆಯುವುದನ್ನು ಕ್ಯಾನ್ಸರ್ ಎನ್ನುತ್ತೇವೆ. ಅದೇ ರೀತಿ ಗರ್ಭಾಶಯದ ಕೊರಳ ಕ್ಯಾನ್ಸರ್‌ಗೂ ಒಂದು ವ್ಯಾಖ್ಯಾನ ನೀಡಲಾಗಿದೆ.

**ಗರ್ಭಕೊರಳ ಕ್ಯಾನ್ಸರ್ ಎಂದರೇನು?**

ಗರ್ಭಾಶಯದ ಕೆಳಭಾಗವಾದಲ್ಲಿ ಉಂಟಾಗುವ ದುಷ್ಟಗಡ್ಡೆಯನ್ನು ಗರ್ಭಾಶಯದ ಕೊರಳ ಕ್ಯಾನ್ಸರ್ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಹ್ಯೂಮನ್ ಪ್ಯಾಪಿಲೋಮಾ ವೈರಸ್ ಸೋಂಕಿನಿಂದ ಉಂಟಾಗುತ್ತದೆ.

**ಹೆಚ್‌ಪಿವಿ ವೈರಸ್ ಮತ್ತು ಕ್ಯಾನ್ಸರ್ ನಡುವಿನ ಸಂಬಂಧ:**

ಹೆಚ್‌ಪಿವಿ ಎಂಬ ವೈರಸ್ ಲೈಂಗಿಕ ಸಂಪರ್ಕದ ಮೂಲಕ ಹರಡುತ್ತದೆ. ವೈರಸ್‌ನ ಕೆಲವು ಪ್ರಭೇದಗಳು ದೀರ್ಘಕಾಲ ದೇಹದಲ್ಲಿದ್ದರೆ, ಅವು ಗರ್ಭಾಶಯದ ಕೊರಳ ಕ್ಯಾನ್ಸರ್‌ಗೆ ಕಾರಣವಾಗುತ್ತವೆ. ಬಹುತೇಕ ಸಂದರ್ಭಗಳಲ್ಲಿ ಸೋಂಕು ತಾನೇ ಗುಣವಾಗಬಹುದು, ಆದರೆ ಕೆಲ ಮಹಿಳೆಯರಲ್ಲಿ ಇದು ಕ್ಯಾನ್ಸರ್‌ಗೆ ತಿರುಗುತ್ತದೆ.

**ವ್ಯಾಪ್ತಿಯ ಗಂಭೀರತೆ:**

ಪ್ರಪಂಚದ ಗರ್ಭಾಶಯ ಕೊರಳ ಕ್ಯಾನ್ಸರ್‌ನಿಂದ ಸಾವನ್ನಪ್ಪುತ್ತಿರುವ 4 ಮಹಿಳೆಯರಲ್ಲಿ ಭಾರತೀಯರು ಒಬ್ಬರು. ವಿಶ್ವ ಆರೋಗ್ಯ ಸಂಸ್ಥೆ 2022ರ ವರದಿ ಪ್ರಕಾರ ಪ್ರಪಂಚದಲ್ಲಿ ಅಂದಾಜು 6.6 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿದ್ದು, 3.5 ಲಕ್ಷ ಮಹಿಳೆಯರು ಸಾವನ್ನಪ್ಪಿದ್ದಾರೆ. ಭಾರತದಲ್ಲಿ ವರ್ಷಕ್ಕೆ 1.27 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. 79 ಸಾವಿರ ಸ್ತ್ರೀಯರು ಸಾವನ್ನಪ್ಪಿದ್ದಾರೆ. ಗರ್ಭಾಶಯ ಕೊರಳ ಕ್ಯಾನ್ಸರ್ ಯುವ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಭಾರತದಲ್ಲಿ 15 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ 51 ಕೋಟಿಗೂ ಹೆಚ್ಚು ಮಹಿಳೆಯರು ಗರ್ಭಾಶಯ ಕೊರಳ ಕ್ಯಾನ್ಸರ್‌ಗೆ ತುತ್ತಾಗುವ ಅಪಾಯದಲ್ಲಿದ್ದಾರೆ ಎಂದು ಅಂದಾಜಿಸಲಾಗಿದೆ.

ಕ್ಯಾನ್ಸರ್ ಹಂತದ ಮುಂಚಿನ ಸ್ಥಿತಿಯಿಂದ ಕ್ಯಾನ್ಸರ್‌ಗೆ ತಿರುಗಲು ಸುಮಾರು 10–15 ವರ್ಷ ಸಮಯ ಬೇಕಾಗುತ್ತದೆ. ಈ ಕ್ಯಾನ್ಸರ್ ಅನ್ನು ತಡೆಗಟ್ಟಬಹುದಾದರೂ ಶೇ. 1ಕ್ಕಿಂತ ಕಡಿಮೆ ಮಹಿಳೆಯರು ಲಸಿಕೆ ಹಾಕಿಸಿಕೊಂಡಿದ್ದಾರೆ. ಶೇ. 3ಕ್ಕಿಂತ ಕಡಿಮೆ ಮಹಿಳೆಯರು ಕ್ಯಾನ್ಸರ್‌ಗೂ ಮೊದಲು ಕಂಡುಹಿಡಿಯುವ ಪರೀಕ್ಷೆಗೆ ಒಳಪಟ್ಟಿದ್ದಾರೆ.


**ಯಾರಿಗೆ ಅಧಿಕ ಅಪಾಯ:**

ಲೈಂಗಿಕ ಸಂಪರ್ಕ ಹೊಂದಿರುವ ಮಹಿಳೆ ಯರು
ಬಹು ಲೈಂಗಿಕ ಪಾಲುದಾರರಿರುವವರು ಅಥವಾ ಅವರ ಪಾಲುದಾರರು
ಪ್ಯಾಪ್ ಸ್ಮಿಯರ್ ಅಥವಾ ಇತರ ಪರೀಕ್ಷೆ ಮಾಡಿಸದವರು
ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು
ಧೂಮಪಾನ, ಅಸ್ವಸ್ಥ ಜೀವನ ಶೈಲಿ

**ಗಮನಿಸಬೇಕಾದ ಎಚ್ಚರಿಕೆ ಕ್ರಮಗಳು**

ಆರಂಭಿಕ ಹಂತದಲ್ಲಿ ಯಾವುದೇ ಸ್ಪಷ್ಟ ಲಕ್ಷಣಗಳು ಕಾಣಿಸಿಕೊಳ್ಳದೇ ಇರಬಹುದು. ಆದರೆ ಮುಂದಿನ ಹಂತಗಳಲ್ಲಿ ಅಸಾಮಾನ್ಯ ಯೋನಿ ರಕ್ತಸ್ರಾವ, ಮಾಸಿಕವಲ್ಲದ ಸಮಯದಲ್ಲಿ ರಕ್ತಸ್ರಾವ, ಹೊಟ್ಟೆ ಕೆಳಭಾಗದ ನೋವು, ಅಸಹಜ ಯೋನಿಸ್ರಾವ ಇಂತಹ ಲಕ್ಷಣಗಳು ಕಂಡು ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಅತ್ಯವಶ್ಯ.






**ಹೆಚ್‌ಪಿವಿ ಲಸಿಕೆ ಬಗ್ಗೆ ಅರಿವು**

- 1. 9 ರಿಂದ 14 ವಷ್ಟಾದೊಳಗಿನವರು ಹೆಣ್ಣು ಮತ್ತು ಗಂಡು ಮಕ್ಕಳಿಗೆ ಲಸಿಕೆ ಹಾಕಿಸಬಹುದು.
- 2. 9ರಿಂದ 14 ವರ್ಷ ವಯಸ್ಸಿನ ಹುಡುಗರು ಮತ್ತು ಹುಡುಗಿಯರಗೆ ಶಿಫಾರಸನಂತೆ 2 ಡೋಸ್ ಲಸಿಕೆಯನ್ನು 0 ಮತ್ತು ಆರು ತಿಂಗಳಲ್ಲಿ ನೀಡಬೇಕು.
- 3. ಲಸಿಕೆ ಶೇ. 99 ರಷ್ಟು ಪರಿಣಾಮಕಾರಿಯಾಗಿದೆ.
- 4. 9 ರಿಂದ 14 ವರ್ಷದೊಳಗಿನ ಮಕ್ಕಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿರುವುದರಿಂದ ಅವರು ಲಸಿಕೆ ಪಡೆಯುವುದು ಸೂಕ್ತ. ಈ ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮ ಉಂಟಾಗುವುದಿಲ್ಲ.
- ಗರ್ಭಾಶಯದ ಕೊರಳ ಕ್ಯಾನ್ಸರ್ ಮರಣಾಂತಿಕವಾದರೂ, ಸಮಯಕ್ಕೆ ತಕ್ಕ ಜಾಗೃತಿ, ತಪಾಸಣೆ ಮತ್ತು ಲಸಿಕೆ ಮೂಲಕ ಇದನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು. ಪ್ರತಿ ಮಹಿಳೆಯ ಆರೋಗ್ಯ–ಕುಟುಂಬದ ಮತ್ತು ಸಮಾಜದ ಆರೋಗ್ಯ ಎಂಬ ಅರಿವು ಬೆಳೆಸುವುದು ಇಂದಿನ ಅಗತ್ಯವಾಗಿದೆ.

# ತಂಬಾಕಿಗೆ ಅಬಕಾರಿ ಸುಂಕ ವಾಪಾಸ್: ಹೆಚ್.ಡಿ.ಕೆ. ಪ್ರಯತ್ನದ ಫಲ

» ಮೊದಲನೇ ಪುಟದಿಂದ

ಗಮನಕ್ಕೆ ತಂದು, ತಂಬಾಕು ಮೇಲಿನ ಅಬಕಾರಿ ಸುಂಕವನ್ನು ರದ್ದು ಮಾಡಬೇಕೆಂದು ವಿನಂತಿಸಿದ್ದರು. ಸಚಿವ ಕುಮಾರಸ್ವಾಮಿ ಅವರ ಮನವಿಗೆ ತಕ್ಷಣವೇ ಸ್ಪಂದಿಸಿರುವ ವಿತ್ತ ಸಚಿವರು, ಅಬಕಾರಿ ಸುಂಕ ವಿನಾಯಿತಿ ನಿರ್ಧಾರ ಕೈಗೊಂಡಿದ್ದಾರೆ. ಈ ಸಂಬಂಧ ಫೆ. 1ರಂದು ಆದೇಶ ಹೊರಡಿಸಿರುವ ತಂಬಾಕು ಮಂಡಳಿಯು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಬಕಾರಿ ಸುಂಕವನ್ನು ಹಿಂಪಡೆಯಲಾಗಿದೆ ಹಾಗು ಫೆ.5ರಿಂದಲೇ ಹರಾಜು ಪ್ರಕ್ರಿಯೆ ಆರಂಭ ಮಾಡುವಂತೆ ನಿರ್ದೇಶನ ನೀಡಿದೆ. ತಂಬಾಕು ಹರಾಜು ವಿಷಯಕ್ಕೆ ಸಂಬಂಧಿಸಿ ತಮ್ಮ ಮನವಿಗೆ ಸ್ಪಂದಿಸಿ ಬೆಳೆಗಾರರ ಪರವಾಗಿ ಕ್ರಮ ವಹಿಸಿದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಚಿವ ಕುಮಾರಸ್ವಾಮಿ ಅವರು ಧನ್ಯವಾದ ತಿಳಿಸಿದ್ದಾರೆ. ತಮ್ಮ ನಿರ್ಧಾರದಿಂದ ತಂಬಾಕು ಬೆಳೆಗಾರರರಿಗೆ ದೊಡ್ಡ ಮಟ್ಟದಲ್ಲಿ ಸಹಾಯವಾಗಲಿದೆ ಎಂದು ಅವರು ವಿತ್ತ ಸಚಿವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಅಲ್ಲದೆ, ಈ ಸಂಬಂಧ ನನ್ನೊಂದಿಗೆ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಅರಕಲಗೂಡು ಶಾಸಕ ಎ.ಮಂಜು, ಪಿರಿಯಾಪಟ್ಟಣ ಮಾಜಿ ಶಾಸಕ ಮಹದೇವು ಹಾಗೂ ಹೆಚ್.ಡಿ. ಕೋಟೆಯ ಜೆಡಿಎಸ್ ಪಕ್ಷದ ಹಿರಿಯ ಮುಖಂಡ ಕೃಷ್ಣ ನಾಯಕ್ ಮುಂತಾದವರು ನನ್ನೊಂದಿಗೆ ಚರ್ಚೆ ನಡೆಸಿದ್ದರೆಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ.

**ಏನಿದರ ಹಿನ್ನಲೆ**

ತಂಬಾಕು ಮೇಲೆ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ದರ ಏರಿಕೆ ವಿರೋಧಿಸಿ ತಂಬಾಕು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಿರಲು ಖರೀದಿ ಕಂಪನಿಗಳು ನಿರ್ಧರಿಸಿದ್ದವು. ಇದರಿಂದ ಹರಾಜು ಪ್ರಕ್ರಿಯೆ ಸ್ಥಗಿತಗೊಂಡು ಮಾರುಕಟ್ಟೆ ಬಂದ್ ಆಗಿದ್ದವು. ರೈತರು ತೀವ್ರ ಸಂಕಷ್ಟಕ್ಕೆ ತುತ್ತಾಗಿದ್ದರು. ಖರೀದಿ ಕಂಪನಿಗಳು ತಮ್ಮ ಮೇಲೆ ವಿಧಿಸಿರುವ ಅನುತ್ಪಾದಕ ತಂಬಾಕಿಗೆ ಅಬಕಾರಿ ಸುಂಕ ಹಾಗು ತಂಬಾಕು ಉತ್ಪನ್ನಗಳಿಗೆ ಜಿಎಸ್‌ಟಿ ಏರಿಕೆಯ ಹಿನ್ನಲೆಯಲ್ಲಿ ತಂಬಾಕು ಖರೀದಿ ಕಂಪನಿಗಳು ತಾತ್ಕಾಲಿಕವಾಗಿ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿವೆ. ಇದರಿಂದಾಗಿ ಮಾರುಕಟ್ಟೆ ಬಂದ್ ಆಗಿದ್ದು, ರೈತರು ಕಷ್ಟಪಟ್ಟು ಬೆಳೆದ ತಂಬಾಕು ಒಣಗುತ್ತಿದೆ. ದಿನದಿನಕ್ಕೂ ಬೆಲೆ ಇಳಿಮುಖವಾಗುತ್ತದೆ. ಈ ನಡುವೆ ಹರಾಜು ಪ್ರಕ್ರಿಯೆಯಲ್ಲಿ ತಾತ್ಕಾಲಿಕವಾಗಿ ಭಾಗವಹಿಸುವುದಿಲ್ಲವೆಂದು ಖರೀದಿದಾರರು ಘೋಷಿಸಿದ್ದರು. ಬೆಳೆಗಾರರು ತೊಂದರೆ ಅನುಭವಿಸಬಾರದು ಎನ್ನುವ ಕಾರಣಕ್ಕೆ ಸಚಿವ ಕುಮಾರಸ್ವಾಮಿ ಅವರು ಮಧ್ಯ ಪ್ರವೇಶಿದರು.

# ಒಳ ಚರಂಡಿ ನಿರ್ಮಾಣಕ್ಕೆ ನಿವಾಸಿಗಳ ಅಗ್ರಹ

• ಪ್ರಜೋದಯ ವರದಿ



**ಅರೇಹಳ್ಳಿ:** ಪಟ್ಟಣದ ಇಂದಿರಾನಗರ ಬೀದಿಯಲ್ಲಿರುವ ಮನೆಗಳ ತ್ಯಾಜ್ಯ ನೀರು ಚರಂಡಿಗೆ ಹರಿದು ಹೋಗುತ್ತಿರುವುದರಿಂದ ಅನೈರ್ಮಲ್ಯ ನಿರ್ಮಾಣವಾಗಿದೆ. ಶಾಶ್ವತ ಪರಿಹಾರವಾಗಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿಬೇಕೆಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ಚರಂಡಿ ಸಮರ್ಪಕವಾಗಿದೆ ಕೊಳಚೆ ನೀರು ನಿಂತಲ್ಲಿಯೇ ನಿಂತು ಸೊಳ್ಳೆಗಳು ಉತ್ಪತ್ತಿಯಾಗಿ ಇಲ್ಲಿನ ನಿವಾಸಿಗಳು ನಾನಾ ಕಾಯಿಲೆಗಳಿಗೆ ತುತ್ತಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಮಳೆಗಾಲ ಪ್ರಾರಂಭವಾದರೆ, ರಸ್ತೆ ಹಾಗು ಚರಂಡಿಯಲ್ಲಿರುವ ಕೊಳಚೆ ನೀರು ಮನೆಗಳಿಗೆ ನುಗ್ಗಿ ನಿವಾಸಿಗಳು ನರಕಯಾತನೆ ಅನುಭವಿಸಬೇಕಾಗುತ್ತದೆ. ಈ ಬಗ್ಗೆ ಪ್ರತಿ ಬಾರಿ ಚುನಾವಣೆ ಸಂದರ್ಭದಲ್ಲಿ ಸ್ಥಳೀಯ ಜನ ಪ್ರತಿನಿಧಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಗ್ರಾಮ ಪಂಚಾಯಿತಿ ಕಚೇರಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ, ಕೆಲವೊಮ್ಮೆ ಬಂದು ತಾತ್ಕಾಲಿಕವಾಗಿ ಕಸ ತೆಗೆದು ಹೋಗುವುದಷ್ಟೇ ಮಾಡುತ್ತಾರೆ. ಶಾಶ್ವತ ಒಳಚರಂಡಿ ವ್ಯವಸ್ಥೆ ಕುರಿತು ಯಾವುದೇ ಯೋಜನೆಯನ್ನು ರೂಪಿಸಿಲ್ಲ. ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಸೂಕ್ತ ಪರಿಹಾರವಾಗಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ವಿಫಲವಾದರೆ, ಸ್ಥಳೀಯರ ಸಹಕಾರದಿಂದ ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುಶೀಲ, ಕೆಂಚಪ್ಪ, ತಂಗಿಯಮ್ಮ, ಜುಬೇದ, ಮಂಜಣ್ಣ, ಅನೀಫ್, ರಾಜಿ, ಸಲ್ಮಾ, ಶರೀಫ್, ಉಮರ್ ಇನ್ನಿತರರು ಉಪಸ್ಥಿತರಿದ್ದರು.

# ಸಮುದ್ರ ಮಧ್ಯದ ಅಪರೂಪದ ನಿಷ್ಕಲಂಕ ಮಹಾದೇವ ದೇವಾಲಯ



ನಮ್ಮ ಗುಜರಾತ್ ಪ್ರವಾಸದಲ್ಲಿ ನಾವು ಭೇಟಿ ನೀಡಿದ ನಿಷ್ಕಲಂಕ ಮಹಾದೇವ ದೇವಾಲಯ ಭಾರತದಲ್ಲೇ ಅಪರೂಪದ ಸಮುದ್ರದ ಮಧ್ಯದ ದೇವಾಲಯವಾಗಿದೆ. ಗುಜರಾತ್‌ನ ಭಾವನಗರ ಜಿಲ್ಲೆಯ ಕೊಲಿಯಾಕ್ ಬೀಚ್‌ನಿಂದ ಸುಮಾರು 1 ಕಿ.ಮೀ. ದೂರದಲ್ಲಿ ಅರೇಬಿಯನ್ ಸಮುದ್ರದ ಮಧ್ಯೆ ಒಂದು ವೇದಿಕೆಯಂಥ ದೊಡ್ಡ ಕಲ್ಲಿನ ಮೇಲೆ ಇರುವ ಈ ದೇವಾಲಯಕ್ಕೆ ನಾವು ಸಮುದ್ರವನ್ನು ಹಾಯ್ದು ಹೋಗಬೇಕು. ಇಲ್ಲಿ ಐದು ಸ್ವಯಂಭೂ ಶಿವಲಿಂಗಗಳು ಮತ್ತು ಪ್ರತಿ ಲಿಂಗದ ಎದುರು ನಂದಿಯ ವಿಗ್ರಹಗಳಿವೆ. ಸಮುದ್ರದ ಉಬ್ಬರವಿಳಿತ ಅಲೆಗಳು ಕಡಿಮೆ ಇರುವಾಗ ಮಾತ್ರ ನಾವು ನಡೆದುಕೊಂಡುಹೋಗಿ ದರ್ಶನ ಮಾಡಬಹುದು. ನಾವು ಕುಟುಂಬದ ಹತ್ತು ಮಂದಿ ಬೆಂಗಳೂರಿನ ನೇತಾಜಿ ಟೂರ್ ಟ್ರಾವೆಲ್ಸ್ ಏಜೆನ್ಸಿಯಿಂದ ಐದು ದಿನಗಳ ಗುಜರಾತ್ ಪ್ರವಾಸ ಕೈಗೊಂಡಿದ್ದೆವು. ನಮ್ಮ ಪ್ರವಾಸದಲ್ಲಿ ಇತರ ಪ್ರವಾಸಿಗರು ಸೇರಿ 23 ಮಂದಿ ಇದ್ದೆವು. ಬೆಂಗಳೂರಿನಿಂದ ಅಹಮದಾಬಾದ್‌ಗೆ ಇಂಡಿಗೋ ವಿಮಾನದಲ್ಲಿ ಪ್ರಯಾಣಿಸಿ ಅಲ್ಲಿಂದ ಏಜೆನ್ಸಿಯವರು ನಿಗದಿ ಮಾಡಿದ್ದ ಖಾಸಗಿ ಬಸ್‌ನಲ್ಲಿ ಗುಜರಾತ್‌ನ ಹಲವಾರು ಪ್ರಸಿದ್ಧ ಯಾತ್ರಾ ಸ್ಥಳಗಳಿಗೆ ಭೇಟಿ ನೀಡಿದೆವು. ಹೀಗೆ ಭೇಟಿ ಇತ್ತ ಪವಿತ್ರ ಸ್ಥಳಗಳಲ್ಲಿ ನಿಷ್ಕಲಂಕ ಮಹಾದೇವ ದೇವಾಲಯವು ಒಂದು. ನಾವು ಭಾವನಗರಕ್ಕೆ ಸಂಜೆ ವೇಳೆಗೆ ತಲುಪಿ ಅಲ್ಲಿ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿ ರೆಸ್ಟ್ ಮಾಡಿದವು. ಬೆಳಿಗ್ಗೆಯಿಂದ ಸುಮಾರು 250–300 ಕಿ.ಮೀ. ಪ್ರಯಣ ಮಾಡಿ ಸುಸ್ತಾಗಿದ್ದೆವು. ರಾತ್ರಿ ಊಟ ಮಾಡಿ ಮಲಗಲು ಹೊರಟಾಗ ಎಲ್ಲರೂ ಬೆಳಿಗ್ಗೆ ಬೇಗನೇ ಎದ್ದು ಸ್ನಾನ ಮಾಡಿ ಏಳೂವರೆ ಹೊತ್ತಿಗೆ ತಿಂಡಿಗೆ ರೆಡಿಯಾಗಿ ಬನ್ನಿ. ಮದ್ಯಾಹ್ನ ಬಿಸಿಲು ಏರುವ ಮೊದಲೇ ನಾವು ಸಮುದ್ರದ ಮಧ್ಯೆ ಇರುವ ನಿಷ್ಕಳಂಕ ಮಹದೇವ ದೇವಾಲಯ ನೋಡಿಕೊಂಡು ಬರೋಣ ಎಂದು ಗೈಡ್ ಕಂ ಟೂರಿಸ್ಟ್ ವ್ಯವಸ್ಥಾಪಕ ಕ್ಯಾಪ್ಟನ್ ತಿಳಿಸಿದರು. ಅವರು ನಾವು ಮಿಸ್ ಆಗದಂತೆ ಗುರುತು ಹಿಡಿಯಲು ಸಂಸ್ಥೆಯ ಕ್ಯಾಪ್ ನೀಡಿದ್ದರು. ಅಂತೆಯೇ ಮಾರನೇ ದಿನ ಬೆಳಿಗ್ಗೆ ನಾವು ತಿಂಡಿ ಮುಗಿಸಿ ಸುಮಾರು 25 ಕಿ.ಮೀ. ದೂರ ಇರುವ ಕೊಲಿಯಾಕ್ ಬೀಚ್ ತಲುಪಿದಾಗ ಒಂಬತ್ತು ಗಂಟೆ ಆಗಿತ್ತು. ಬೀಚ್‌ನಲ್ಲಿ ಐಸ್‌ಕ್ರೀಂ ಎಳನೀರು ಅಂಗಡಿಗಳು ಮೊದಲಾಗಿ ಬೇರೆ ಬೇರೆ ಅಂಗಡಿ ಹೋಟೆಲ್‌ಗಳು ಇದ್ದವು. ನಿಮ್ಮ ಚಪ್ಪಲಿಗಳನ್ನು ಎಳನೀರು ಅಂಗಡಿಯಲ್ಲಿ ಬಿಟ್ಟು ಬರಿಗಾಲಿನಲ್ಲಿ ಸಮುದ್ರದಲ್ಲಿ ನಡೆಯಿರಿ ಎಂದು ಕ್ಯಾಪ್ಟನ್ ಸಲಹೆ ನೀಡಿದಂತೆ ನಾವು ಆಳುದ್ದ ನೀರಿನ ಸಮುದ್ರದಲ್ಲಿ ನಿಧಾನವಾಗಿ ನಡೆದು ದೇವಾಲಯ ಪ್ರದೇಶ ತಲುಪಿದೆವು. ಅಲ್ಲಿ ಒಂದು ಕೊಳವಿದೆ. ಇದನ್ನು ಪಾಂಡವರ ಕೊಳ ಎಂದು ಕರೆಯುವರು. ಆ ಕೊಳದಲ್ಲಿ ಕೈಕಾಲು ತೊಳೆದು ನಂತರ ಐದು ಲಿಂಗಗಳ ದರ್ಶನ ಪಡೆದವು.

ಈ ಲಿಂಗಗಳು ಕುರುಕ್ಷೇತ್ರ ಯುದ್ಧದ ನಂತರ ಇಲ್ಲಿಗೆ ಬಂದ ಪಾಂಡವರಿಂದ ಪ್ರತಿಷ್ಠಾಪಿಸಲ್ಪಟ್ಟಿದೆ ಎಂದು ನಂಬಿಕೆಯಿದೆ. ಐದು ಲಿಂಗಗಳಲ್ಲಿ ನಿಷ್ಕಳಂಕ ಮಹಾದೇವ ಎಂದು ಗುರುತಿಸಲ್ಪಡುವುದು ಧರ್ಮರಾಜ ಪ್ರತಿಷ್ಠಾಪಿಸಿದ ಲಿಂಗಕ್ಕೆ ಮುಖ್ಯ ಪೂಜೆ. ನಂತರ ಭೀಮ, ಅರ್ಜುನ, ನಕುಲ, ಸಹದೇವ ಪ್ರತಿಷ್ಠಾಪಿಸಿದರೆಂದು ಹೇಳುವ ಲಿಂಗಗಳಿಗೆ.

ಒಂದು ಕಥೆಯಂತೆ ಕೌರವರನ್ನು ಕೊಂದ ಪಾಪದಿಂದ ಪಾಂಡವರು ಪಾಪಪ್ರಜ್ಞೆಯಲ್ಲಿ ಪರಿತಪಿಸುತ್ತಿದ್ದರು. ಈ ಪಾಪ ಪರಿಹಾರಕ್ಕೆ ಅವರು ಶ್ರೀ ಕೃಷ್ಣನ ಸಲಹೆ ಕೇಳಿದರು. ಶ್ರೀ ಕೃಷ್ಣ ಅವರಿಗೊಂದು ಕಪ್ಪು ಬಣ್ಣದ ಬಾವುಟ ಮತ್ತು ಕಪ್ಪು ಹಸು ನೀಡಿ ಇದನ್ನು ಸ್ವತಂತ್ರವಾಗಿ ಬಿಟ್ಟು ಹಸು ಹೋದಲೆಲ್ಲಾ ಧ್ವಜದೊಂದಿಗೆ ಹಿಂಬಾಲಿಸಲು ಮತ್ತು ಯಾವ ಜಾಗದಲ್ಲಿ ಧ್ವಜ ಮತ್ತು ಹಸು ಬಿಳಿಯ ಬಣ್ಣಕ್ಕೆ ತಿರುಗುವುದೋ ಅಲ್ಲಿ ಶಿವನನ್ನು ಪ್ರಾರ್ಥಿಸಿ ಕ್ಷಮೆಯಾಚಿಸಿ ಆಗ ನಿಮ್ಮ ಪಾಪ ವಿಮೋಚನೆಯಾಗುತ್ತದೆ ಎಂದು ತಿಳಿಸಿದನು. ಮುಂದೆ ಪಾಂಡವರು ಹಲವು ಊರು ಸುತ್ತಿ ನಂತರ ಈ ಪ್ರದೇಶಕ್ಕೆ ತಲುಪಿದಾಗ ಧ್ವಜ ಹಾಗೂ ಹಸು ಬಿಳಿ ಬಣ್ಣಕ್ಕೆ ತಿರುಗಿದವು. ಅಲ್ಲಿ ಪಾಂಡವರು ಶಿವನನ್ನು ಪ್ರಾರ್ಥಿಸಿ ತಮ್ಮ ತಪ್ಪುಗಳಿಗೆ ಕ್ಷಮೆ ಯಾಚಿಸಿದರು. ಶಿವನು ಪ್ರತಿಯೊಬ್ಬ ಸಹೋದರರಿಗೂ ಐದು ಲಿಂಗಗಳ ದರ್ಶನ ಭಾಗ್ಯ ಕರುಣಿಸಿದನು. ಪಾಂಡವರು ಕಳಂಕವನ್ನು ಕಳೆದು ನಿಷ್ಕಳಂಕರಾಗಿ ಹೊರಹೊಮ್ಮಿದರಾಗಿ ಇಲ್ಲಿಯ ಶಿವಲಿಂಗಗಳಿಗೆ ನಿಷ್ಕಳಂಕ ಮಹಾದೇವ ಎಂಬ ಹೆಸರು ಬಂದಿದೆ. ಇಲ್ಲಿರುವ ಲಿಂಗಗಳಿಗೆ ಹಾಲು ಬಿಲ್ವಪತ್ರೆ ಮತ್ತು ಹೂಗಳನ್ನ ಸಮರ್ಪಿಸಬಹುದು. ಇದನ್ನು ಮಾರಾಟ ಮಾಡಲು ಬೀಚ್ ಬಳಿ ಸಾಕಷ್ಟು ಜನರಿರುತ್ತಾರೆ. ನಾವು ಅಲ್ಲಿಯೇ ಹಾಲು ಬಿಲ್ವಪತ್ರೆ, ಖರೀದಿಸಿ ಕ್ಷೀರಾಭಿಷೇಕ ಮಾಡಿ ಪೂಜಿಸಿದೆವು. ಶ್ರಾವಣ ಮಾಸದ ಅಮಾವಾಸ್ಯೆಯೆಂದು ಇಲ್ಲಿ ವಿಶೇಷ ಜಾತ್ರೆ ನಡೆಯುತ್ತದೆ. ಸಮುದ್ರದಲ್ಲಿ ಉಬ್ಬರವಿದ್ದಾಗ ಲಿಂಗಗಳಿಂದ ಕೂಡಿದ ಕಲ್ಲು ಸಂಪೂರ್ಣ ಮುಳುಗುತ್ತದೆ. ಆಗ ಇಲ್ಲಿರುವ ಎತ್ತರದ ಕಂಬದ ತುದಿ ಹಾಗೂ ತುದಿಯಲ್ಲಿನ ಧ್ವಜ ಮಾತ್ರ ಕಾಣಿಸುತ್ತದೆ. ಇಲ್ಲಿಯ 20 ಅಡಿ ಎತ್ತರದ ಧ್ವಜವೆಂದೂ ಕೆಳಗುರುಳಿದ ಸಂದರ್ಭವೆ ಇಲ್ಲ. ಈ ಧ್ವಜವು ವರ್ಷಪೂರ್ತಿ ಹಾರಾಡುತ್ತಿರುತ್ತದೆ. ಶ್ರಾವಣ ಮಾಸದ ಅಮಾವಾಸ್ಯೆ ಮುಗಿದು ಪಾಡ್ಯ ಆರಂಭವಾಗುವ ದಿನ ಇಲ್ಲಿ ಭಾದರ್ವಿ ಎಂಬ ಜಾತ್ರೆ ನಡೆಯುತ್ತದೆ. ದೇವಾಲಯೋತ್ಸವವು ಭಗವಾಧ್ವಜವನ್ನು ಆರಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಮುಂದೆ ಈ ಧ್ವಜವು ನಿರಂತರ 364 ದಿನ ಹಾರಾಡುತ್ತಿರುತ್ತದೆ. ಮತ್ತೆ ಮರುವರ್ಷದ ಭಾದ್ರಪದ ಮಾಸದ ಉತ್ಸವ ದಿನವೇ ಬದಲಾಯಿಸಲ್ಪಡುತ್ತದೆ. (ಮಾಹಿತಿ: ಡಾ.ಪ್ರದೀಪಕುಮಾರ್ ಹೆಬ್ರಿಯವರ ಗುಜರಾತ್ ಪ್ರವಾಸ ಕೃತಿ) ನಾವು ಸಮುದ್ರದ ಸೊಬಗನ್ನು ಸವಿಯುತ್ತಾ ಅಲ್ಲಿ ಸ್ವಲ್ಪ ಸುತ್ತಾಡಿ ಧ್ವಜದ ಮುಂತೆ ನಿಂತು ಪೋಟೋ ತೆಗೆಸಿಕೊಂಡೆವು. ಅಲ್ಲಿ ವೃತ್ತಿಪರ ಪೋಟೋಗ್ರಾಫರ್ ಇದ್ದು ಆಗಲೇ ಪೋಟೋ ತೆಗೆದು ಕಾಪಿ ಕೊಡುತ್ತೇನೆಂದು ಹೇಳಿ ಆತನಲ್ಲಿ ಹಣ ಕೊಟ್ಟು ಗ್ರೂಪ್ ಪೋಟೋ ತೆಗೆಸಿಕೊಂಡೆವು. ದರ್ಶನ ಮುಗಿಸಿ ಮತ್ತೇ ಸಮುದ್ರದಲ್ಲಿ ಹಾಯದು ಬಂದು ದಡ ಸೇರಿ ನಾವು ಚಪ್ಪಲಿ ಬಿಟ್ಟಿದ್ದ ಎಳನೀರು ಅಂಗಡಿಯಲ್ಲಿ ಎಳನೀರು ಕುಡಿದು ಮತ್ತೇ ಬಸ್ಸು ಹತ್ತಿ ಕುಳಿತ್ತಾಗ ಒಂದು ಗಂಟೆಯಾಗಿತ್ತು.

**– ಗೊರೂರು ಅನಂತರಾಜು, ಹಾಸನ.**
**ಮೊ: 9449462879**
ವಿಳಾಸ: ಹುಣಸಿನಕೆರೆ ಬಡಾವಣೆ, 29ನೇ ವಾರ್ಡ್, 3ನೇ ಕ್ರಾಸ್, ಶ್ರೀ ಶನೀಶ್ವರ ದೇವಸ್ಥಾನ ರಸ್ತೆ, ಹಾಸನ.

# ದಯಮಾಡಿ ಟ್ರೇಲರ್ ರಿಲೀಸ್ ಮಾಡಬೇಡಿ...

**» ಟ್ರೇಲರ್ ನೋಡಿಯೇ ಸಾಕಪ್ಪಾ ಸಾಕು ಎನ್ನುವಂತಿರಬಾರದು ಅಲ್ಲವೇ? ಇತ್ತೀಚಿನ ಸಿನಿಮಾಗಳ ಟ್ರೇಲರ್ ನೋಡಿ, ಮುಕ್ಕಾಲು ಭಾಗ ಕತ್ತಲೆ. ಸಿನಿಮಾವೂ ಕತ್ತಲೆಯೇ. ಎಷ್ಟಾದರೂ ಟ್ರೇಲರ್ ಎನ್ನುವುದು ಸಿನಿಮಾದ ಒಂದು ಝಲಕ್ ತಾನೆ? ಇನ್ನುಳಿದ ಬೆಳಕಿನ ಭಾಗದಲ್ಲಿ ಬೆಂಕಿ, ಬಾಂಬು, ಕಾರುಗಳನ್ನು ಸ್ಫೋಟಿಸುವುದು, ಹೆಲಿಕಾಪ್ಟರ್ ಉಡಾಯಿಸುವುದು ಇತ್ಯಾದಿ, ಇತ್ಯಾದಿ.**

ವಿದೇಶವಾಸಿ ಈ ಬಾರಿ ಭಾರತಕ್ಕೆ ಬರುವ ಪೂರ್ವದಲ್ಲಿ, ಒಂದಷ್ಟು ಕನ್ನಡ ಚಲನಚಿತ್ರಗಳನ್ನು ನೋಡಬೇಕು ಎಂದು ತೀರ್ಮಾನಿಸಿದ್ದೆ. ಅವುಗಳಲ್ಲಿ ಹಿಂದಿಯ ಧುರಂಧರ್, ಬಾರ್ಡರ್–2 ಚಿತ್ರಗಳೊಂದಿಗೆ ಕೆಲವು ಕನ್ನಡ ಚಲನಚಿತ್ರಗಳೂ ಸೇರಿಕೊಂಡಿದ್ದವು. ಕನ್ನಡದಲ್ಲಿ ಪ್ರಮುಖವಾಗಿ ದರ್ಶನ್ ಅಭಿನಯದ ಡೆವಿಲ್, ಸುದೀಪ್ ಅಭಿನಯದ ಮಾರ್ಕ್, ಶಿವರಾಜ್ ಕುಮಾರ್, ಉಪೇಂದ್ರ ಮತ್ತು ರಾಜ್ ಶೆಟ್ಟಿ ಅಭಿನಯದ 45 ಸಿನಿಮಾಗಳು ನನ್ನ ಬಕೆಟ್ ಲಿಸ್ಟಲ್ಲಿದ್ದವು. ಏಕೆಂದರೆ 2025ರ ವರ್ಷಾಂತ್ಯದಲ್ಲಿ ಬಿಡುಗಡೆಗೂ ಮುನ್ನ ಮತ್ತು ಬಿಡುಗಡೆಯಾದ ದಿನಗಳಲ್ಲಿ ಭಾರಿ ಸುದ್ದಿ ಮಾಡಿದ ಚಿತ್ರಗಳು ಇವು.




ದರ್ಶನ್ ಜೈಲಿನಲ್ಲಿದ್ದರೂ ಡೆವಿಲ್ ಚಿತ್ರವನ್ನು ಮುಗಿಸಿ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿದ್ದು ಒಂದು ಕಡೆಯಾದರೆ, ಸಂಗೀತ ನಿರ್ದೇಶಕರಾಗಿದ್ದು ಚಿತ್ರವನ್ನು ನಿರ್ದೇಶಿಸಿದ, ಅದರಲ್ಲೂ ಮೂವರು ದಿಗ್ಗಜ ನಟರನ್ನು ತಮ್ಮ ಚಿತ್ರಕ್ಕೆ ಕರೆ ತರುವುದಕ್ಕೂ ಮೊದಲು ಸುಮಾರು ಮುಕ್ಕಾಲು ಭಾಗ ಚಿತ್ರವನ್ನು ಕೃತಕ ಬುದ್ಧಿಮತ್ತೆಯಲ್ಲಿ (ಎಐ) ರಚಿಸಿ ತೋರಿಸಿದ್ದ ಅರ್ಜುನ್ ಜನ್ಯ ಅವರ 45 ಚಿತ್ರ ಇನ್ನೊಂದು ಕಡೆ.

ಹಾಗೆಯೇ ಮ್ಯಾಕ್ಸ್ ನಂತರ ಬರುತ್ತಿರುವ ಸುದೀಪ್ ಅವರ ಮಾರ್ಕ್ ಚಿತ್ರ. ಇವುಗಳ ಕುರಿತಾಗಿ ಇದ್ದ ಆಶಾಗೋಪುರಗಳು, ಸುದ್ದಿ ಸಂಭ್ರಮಗಳು, ಈ ಮೂರೂ ಚಲನಚಿತ್ರಗಳನ್ನು ನೋಡಬೇಕು ಎನ್ನುವ ಕೌತುಕವನ್ನು ಹೆಚ್ಚಿಸಿದ್ದವು. ಆದ್ದರಿಂದ, ಬೆಂಗಳೂರಿಗೆ ಬಂದು ಇಳಿಯುತ್ತಿದ್ದಂತೆಯೇ 2–3 ವಾರದ ಹಿಂದೆಯಷ್ಟೇ ಬಿಡುಗಡೆಯಾಗಿದ್ದ ಕನ್ನಡದ ಈ ಮೂರೂ ಚಿತ್ರಗಳನ್ನು ಚಿತ್ರಮಂದಿರಗಳಲ್ಲಿ ಹುಡುಕಿದೆ.

ತಿಳಿದು ಬಂದ ವಿಷಯವೆಂದರೆ, ಬೆಂಗಳೂರಿನ ಯಾವ ಚಿತ್ರಮಂದಿರದಲ್ಲೂ ಈ ಮೂರು ಚಿತ್ರಗಳು ಇಲ್ಲ ಎಂಬುದು. ಅದಕ್ಕಿಂತ ಮೊದಲು ಬಿಡುಗಡೆಯಾದ ಧುರಂಧರ್ ಮತ್ತು ಮೊನ್ನೆ ಮೊನ್ನೆ ಬಿಡುಗಡೆಯಾದ ಬಾರ್ಡರ್–2 ಚಿತ್ರಮಂದಿರಗಳಲ್ಲಿ ಮುಂದುವರಿದಿದ್ದು, ಕನ್ನಡದ ಮೂರೂ ದೊಡ್ಡ ಬಜೆಟ್ ಚಿತ್ರಗಳ ಕಥೆ ನೀರಿನಲ್ಲಿ ನೆನೆದ ಪಟಾಕಿಯಂತಾದದ್ದು ತಿಳಿದು ಬೇಸರವಾಯಿತು.

ಈಗ, ಕಳೆದ ವಾರ ತೆರೆಗೆ ಬಂದ ಇನ್ನೆರಡು ಬಿಗ್ ಬಜೆಟ್ ಚಿತ್ರಗಳಾದ ಲ್ಯಾಂಡ್‌ಲಾರ್ಡ್ ಮತ್ತು ಕಲ್ಟ್ ಕಥೆ ಏನು ಎಂದು ತಿಳಿಯುವ ಹೊತ್ತಿಗೆ, ಒಂದೇ ದಿನ ಆರು ಹೊಸ ಚಿತ್ರಗಳು ಬಿಡುಗಡೆಯಾಗುತ್ತಿವೆಯಂತೆ. ಅದರೊಂದಿಗೆ ಒಂದು ವಾರ ನಡೆಯುವ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಬೇರೆ. ಅಲ್ಲಿ ಅರವತ್ತು ದೇಶಗಳ ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳ ಪ್ರದರ್ಶನ. ಮೊದಲೇ ಉಲ್ಲಾಸ, ಮೇಲಿಂದ ಫಲ್ಗುಣ ಮಾಸ...! ಜನ ಸಿನಿಮಾ ನೋಡಲು ಚಿತ್ರ ಮಂದಿರಕ್ಕೆ ಬರುತ್ತಿಲ್ಲ ಎನ್ನುವ ಕೂಗಿನ ನಡುವೆಯೇ ಇಷ್ಟೆಲ್ಲ ನಡೆಯುತ್ತಿದೆ!

ಇನ್ನು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದ ಕಥೆ ಹೇಳುವುದಕ್ಕಿಂತ ಹೇಳದೇ ಇದ್ದರೇ ಒಳ್ಳೆಯದು. ಇಂಥ ಒಂದು ಚಿತ್ರೋತ್ಸವದ ಉದ್ದೇಶ ಒಳ್ಳೆಯದೇ. ಆದರೆ, ಸರಕಾರ ಅದಕ್ಕೆ ಖರ್ಚು ಮಾಡುವ ಹಣ ಎಷ್ಟು ಎಂದು ಕೇಳಿದರೆ, ಅದನ್ನು ನಿರ್ವಹಿಸುತ್ತಿರುವ ರೀತಿಯನ್ನು ನೋಡಿದರೆ, ಆಯೋ ಜಕರಿಗೇ ಪ್ರೀತಿಯಾಗಬೇಕು. ಅರವತ್ತು ದೇಶಗಳು ಭಾಗವಹಿಸುತ್ತಿರುವ ಈ ಚಿತ್ರೋತ್ಸವದಲ್ಲಿ ಕಂಡದ್ದು ಎರಡೋ–ಮೂರೋ ವಿದೇಶಿ ಮುಖಗಳು ಮಾತ್ರ.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ಅವರ, ಕನ್ನಡ ಸಿನಿಮಾಗಳ ನಿರ್ಮಾಣದಿಂದ ಬಿಡುಗಡೆಯವರೆಗಿನ ಪರವಾನಗಿ ಪಡೆಯುವ ಪ್ರಯಾಣದ ಗೋಳಿನ ಭಾಷಣ! ತಾವು ಮಾತನಾಡುತ್ತಿರುವುದು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ವೇದಿಕೆಯಲ್ಲಿ ಎನ್ನುವುದು ಅವರಿಗೇ ನೆನಪಿದ್ದಂತಿಲ್ಲ.

ಬಿಡಿ, 99 ವರ್ಷದ ಇತಿಹಾಸವಿರುವ ಕನ್ನಡ ಚಲನಚಿತ್ರೋದ್ಯಮದಿಂದ ಈ ಉತ್ಸವದಲ್ಲಿ ಎಷ್ಟು ಜನ ಭಾಗಿಯಾಗಿದ್ದರೆಂದು ಎಣಿಸಿದರೆ, ಮಾಧ್ಯಮದವರ ಕ್ಯಾಮರಾ ಸಂಖ್ಯೆಗಿಂತಲೂ ಕಡಿಮೆ. ಅವರಿಗೂ ಕುಳಿತುಕೊಳ್ಳಲು ಸ್ಥಳದ ಅಭಾವ. ಚಿತ್ರೋದ್ಯಮದಲ್ಲಿರುವವರಿಗಿಂತಲೂ ಹೊರಗಿನವರೇ ಹೆಚ್ಚು ಎಂದರೂ ತಪ್ಪಿಲ್ಲ.

ಹೌದು, ಚಿತ್ರೋದ್ಯಮದವರೆಲ್ಲ ಎಲ್ಲಿದ್ದರು? ಅವರೇ ಮನೆಯಲ್ಲಿ ಕುಳಿತು, ಜನ ತಮ್ಮ ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರುತ್ತಿಲ್ಲ ಎನ್ನುವುದು ಎಷ್ಟು ಸರಿ? ಅವರ ಗೋಳೂ ಸರಿಯೇ ಬಿಡಿ, ಪ್ರೀಮಿಯರ್ ಶೋ ನೋಡಲು ಬಂದಷ್ಟು ಜನವೂ ಚಿತ್ರಮಂದಿರದಲ್ಲಿ ಸಿನಿಮಾ ಬಿಡುಗಡೆಯಾದಾಗ ನೋಡಲು ಬರದಿದ್ದರೆ ಅವರಾದರೂ ಏನು ಮಾಡಬೇಕು? ಪಾಪ, ತಮ್ಮ ಪಾಪವನ್ನು ಜನರ ಮೇಲೆ ಎತ್ತಿ ಹಾಕುವುದೊಂದೇ ದಾರಿ.

ಇಲ್ಲಿ ಇನ್ನೂ ಒಂದು ಪ್ರಶ್ನೆ ಮೂಡುವುದು ಸಹಜ. ಟೀಸರ್ ಬಿಡುಗಡೆಯಾದ ಒಂದೋ–ಎರಡೋ ಗಂಟೆಯ ಅವಧಿಯಲ್ಲಿ ಲಕ್ಷಗಟ್ಟಲೆ ಜನ ನೋಡುತ್ತಾರೆ, ಆದರೆ ಚಿತ್ರ ನೋಡಲು ಚಿತ್ರಮಂದಿರಕ್ಕೆ ಬರುವುದಿಲ್ಲ. ಅಥವಾ ಕೆಲವು ದಿನಗಳ ನಂತರ ಓಟಿಟಿಯಲ್ಲಿ ಬಿಡುಗಡೆಯಾದಾಗಲೂ ಆ ಚಿತ್ರವನ್ನು ನೋಡುವುದಿಲ್ಲ ಎಂದಾದರೆ ಇದರ ಹಿಂದಿನ ಕಾರಣವೇನು? ಟೀಸರ್‌ಗಳು, ಟ್ರೇಲರ್‌ಗಳು ಪ್ರೇಕ್ಷಕರನ್ನು ಚಿತ್ರ ನೋಡಲು ಪ್ರೇರೇಪಿಸುವಂತಿರಬೇಕು, ಚಿತ್ರಮಂದಿರದತ್ತ ಸೆಳೆಯುವಂತಿರಬೇಕು.

ಟ್ರೇಲರ್ ನೋಡಿಯೇ ಸಾಕಪ್ಪಾ ಸಾಕು ಎನ್ನುವಂತಿರಬಾರದು ಅಲ್ಲವೇ? ಇತ್ತೀಚಿನ ಸಿನಿಮಾಗಳ ಟ್ರೇಲರ್ ನೋಡಿ, ಮುಕ್ಕಾಲು ಭಾಗ ಕತ್ತಲೆ. ಸಿನಿಮಾವೂ ಕತ್ತಲೆಯೇ. ಎಷ್ಟಾದರೂ ಟ್ರೇಲರ್ ಎನ್ನುವುದು ಸಿನಿಮಾದ ಒಂದು ಝಲಕ್ ತಾನೆ? ಇನ್ನುಳಿದ ಬೆಳಕಿನ ಭಾಗದಲ್ಲಿ ಬೆಂಕಿ, ಬಾಂಬು, ಕಾರುಗಳನ್ನು ಸ್ಫೋಟಿಸುವುದು, ಹೆಲಿಕಾಪ್ಟರ್ ಉಡಾಯಿಸುವುದು ಇತ್ಯಾದಿ, ಇತ್ಯಾದಿ.

ಅದರ ಹೊರತಾಗಿ ಅಲ್ಪ–ಸ್ವಲ್ಪ ಬೆಳಕು ಕಾಣಬೇಕು ಎಂದರೆ ಹೀರೋ ಸಿಗರೇಟ್ ಹೊತ್ತಿಸಬೇಕು. ಆ ಸಿಗರೇಟ್ ಬೆಳಕಿನಲ್ಲಿಯೇ ಹೀರೋ, ವಿಲನ್‌ಗಳ ಗಡ್ಡ, ಮೀಸೆಯಿಂದ ತುಂಬಿದ ಎರಡು ಕಣ್ಣು, ಒಂದು ಮೂಗು ಮಾತ್ರ ಕಾಣುವ ಮುಖ ಕಾಣಬೇಕು. ಮೊದಲೇ ಕತ್ತಲು, ಮುಖದ ತುಂಬ ಕೂದಲು, ಇನ್ನು ಅಭಿನಯ ಎಲ್ಲಿಂದ ಕಾಣಬೇಕು? ಒಂದು ಲೆಕ್ಕದಲ್ಲಿ ಅದು ಒಳ್ಳೆಯದೇ.

ಅಭಿನಯ ಬರದಿದ್ದವರಿಗೆ, ಕೆಟ್ಟ ಅಭಿನಯ ಮಾಡುವವರಿಗೆ ಅದೇ ಒಳ್ಳೆಯದು. ಕೆಲವರು ಅದೇ ಕಾರಣಕ್ಕೆ ಮುಖದ ತುಂಬ ರೋಮ ಬೆಳೆಸಿದ್ದೂ ಇರಬಹುದು, ಯಾರಿಗೆ ಗೊತ್ತು? ಇಂಥ ಟ್ರೇಲರ್ ನೋಡಿ ಜನ ಸಿನಿಮಾ ನೋಡಲು ಬರುತ್ತಾರೆಂದು ಚಿತ್ರದ ನಿರ್ಮಾಪಕರೋ, ನಿರ್ದೇಶಕರೋ ತಿಳಿಯುವುದಾದರೆ, ಇಂಥ ಟ್ರೇಲರ್ ನೋಡಿ ಬರದೇ ಇರುವವರೂ ಇರುತ್ತಾರೆ, ದಿನದಿಂದ ದಿನಕ್ಕೆ ಅವರ ಸಂಖ್ಯೆಯೇ ಹೆಚ್ಚಾಗುತ್ತಿದೆ ಎನ್ನುವ ಸತ್ಯವನ್ನೂ ತಿಳಿಯಬೇಕು.

ಹೆಚ್ಚು ಜನರು ಟ್ರೇಲರ್ ನೋಡಿದ್ದಾರೆ ಎಂದ ಮಾತ್ರಕ್ಕೆ ಸಿನಿಮಾವನ್ನೂ ಹೆಚ್ಚು ಜನ ನೋಡುತ್ತಾರೆ ಎಂಬ ತಪ್ಪು ಕಲ್ಪನೆಯ ಇದ್ದರೆ, ಅಂಥವರ ಸಹಾಯಕ್ಕೆ ಜನರೂ ಬರುವುದಿಲ್ಲ, ಯುಟ್ಯೂಬೂ ಬರುವುದಿಲ್ಲ.

ನಿಮ್ಮ ಸಿನಿಮಾಕ್ಕೆ ಜನ ಬರಬೇಕು ಎಂದರೆ, ದಯಮಾಡಿ ನಿಮ್ಮ ಚಿತ್ರದ ಟ್ರೇಲರ್, ಟೀಸರ್ ಬಿಡುಗಡೆ ಮಾಡಬೇಡಿ ಎನ್ನುವಂತಾಗಿದೆ. ಆ ಕಾರಣದಿಂದಾದರೂ ಸ್ವಲ್ಪ ಮಟ್ಟಿನ ಕುತೂಹಲ ಉಳಿಸಿಕೊಂಡ ಪ್ರೇಕ್ಷಕ ಚಿತ್ರಮಂದಿರದ ಕಡೆ ಸುಳಿದರೂ ಸುಳಿಯಬಹುದು.

ಹಾಗಾದರೆ ಕನ್ನಡದ ಪ್ರೇಕ್ಷಕ ಚಿತ್ರಮಂದಿರದ ಕಡೆ ಸುಳಿಯುವುದೇ ಇಲ್ಲ ಎನ್ನುವ ವಾದವನ್ನು ಕಾಂತಾರ, ಮಾದೇವ, ಸು ಫ್ರಮ್ ಸೋ ಚಿತ್ರಗಳು ಸುಳ್ಳಾಗಿಸಿವೆ. ಒಂದು ವಿಷಯ ಗಮನಿಸಿ, ಇವೆಲ್ಲ ಹೆಚ್ಚು ಪ್ರಚಾರವಿಲ್ಲದೇ ತೆರೆಗೆ ಬಂದ ಚಿತ್ರಗಳು. ಬಿಡುಗಡೆಯಾದ ನಂತರವೂ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಿದ ಚಿತ್ರಗಳಲ್ಲ. ರಿಯಾಲಿಟಿ ಶೋದಲ್ಲಿ ಭಾಗವಹಿಸಿದವರ ಜತೆ ಸಿನಿಮಾ ನೋಡುವುದು, ಮುಖ್ಯಮಂತ್ರಿಗಳೊಂದಿಗೆ ಸಿನಿಮಾ ನೋಡುವುದು ಮುಂತಾದ ಪ್ರಚಾರದ ಗಿಮಿಕ್‌ಗಳು ಹೆಚ್ಚು ಕೆಲಸ ಮಾಡುವುದಿಲ್ಲ. ಆ ಕಾರಣಕ್ಕೆ ಜನ ಚಿತ್ರಮಂದಿರಕ್ಕೆ ಬರುವುದಿಲ್ಲ.

ಒಂದು ವೇಳೆ ಬಂದರೆ ಅದು ತಾವು ಇಷ್ಟಪಟ್ಟವರನ್ನು ನೋಡಲೆಂದೇ ಹೊರತು, ಸಿನಿಮಾ ನೋಡಲು ಅಲ್ಲ. ಸಮಸ್ಯೆ ಏನು ಎಂದರೆ, ಇದನ್ನೆಲ್ಲ ಹೇಳಿದರೆ ಇವರಿಗೆ ಅರ್ಥವೂ ಆಗುವುದಿಲ್ಲ. ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವುದು ಸರಿ, ಆದರೆ ಆ ಹೆಗ್ಗಣವೂ ಸತ್ತು ನಾರುತ್ತಿರುವಾಗ ಏನು ಮಾಡುವುದು? ಇನ್ನೊಂದು ಗಂಭೀರ ವಿಷಯವೆಂದರೆ, ಕನ್ನಡದ ಪ್ರೇಕ್ಷಕರು, ಅದರಲ್ಲೂ ಯುವ ಜನರು ಕನ್ನಡ ಚಲನಚಿತ್ರಗಳಿಂದ ದೂರವಾಗುತ್ತಿರುವುದು.

ಇಂದಿನ ಯುವಜನರು ಇಂಗ್ಲಿಷ್, ಹಿಂದಿ ಕಡೆ ತಿರುಗಿದ್ದಾರೆ. ಕನ್ನಡದ ಪ್ರೇಕ್ಷಕರು ಕನ್ನಡ ಸಿನಿಮಾ, ಧಾರಾವಾಹಿ ನೋಡದೇ, ಕೊರಿಯನ್ ಧಾರಾವಾಹಿ, ಮಲಯಾಳಂ, ತೆಲುಗು, ಮರಾಠಿ ಸಿನಿಮಾಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ಒಂದು ಕಾಲದಲ್ಲಿ, ಕರ್ನಾಟಕದಲ್ಲಿ ಮಲಯಾಳಂ ಸಿನಿಮಾಗಳು ಮ್ಯಾಟಿನಿಗೆ ಮಾತ್ರ ಸೀಮಿತವಾಗಿರುತ್ತಿದ್ದವು. ಸಿನಿಮಾ ಮಧ್ಯದಲ್ಲಿ ಕಥೆಗೆ ಸಂಬಂಧವೇ ಇಲ್ಲದ ಅಶ್ಲೀಲ ವಿಡಿಯೋ ತುಣುಕುಗಳು ಇರುತ್ತಿದ್ದವು. ಸಭ್ಯರೆಂದು ಕರೆಸಿಕೊಳ್ಳುವವರು ಆ ಕಾರಣಕ್ಕೆ ಅಂಥ ಸಿನಿಮಾಕ್ಕೆ ಹೋಗುತ್ತಿರಲಿಲ್ಲ, ಮಕ್ಕಳನ್ನಂತೂ ಕಳಿಸುತ್ತಲೇ ಇರಲಿಲ್ಲ.

ಅದನ್ನು ನೋಡಲೆಂದೇ ಹೋಗುವವರೂ ಇದ್ದರು ಅನ್ನಿ. ಆದರೆ ಇಂದು ಮಲಯಾಳಂ ಸಿನಿಮಾ ಸಂಪೂರ್ಣ ಬದಲಾಗಿದೆ ಎನ್ನುವುದನ್ನು ಒಪ್ಪಲೇಬೇಕು. ಮಲಯಾಳಂ ಸಿನಿಮಾ ಎಂದರೆ ಮೂಗು ಮುರಿಯುವ ಸಮಯ, ಸಂದರ್ಭದಿಂದ ಈ ರೀತಿಯ ಬದಲಾವಣೆ ಸಾಮಾನ್ಯವಾದದ್ದಲ್ಲ.



ಮಾತೆತ್ತಿದರೆ ಅಪ್ಪಾಜಿ, ಅಣ್ಣಾವ್ರು, ದೇವರು ಎಂದು ಡಾ. ರಾಜ್‌ಕುಮಾರ್ ಅವರನ್ನು ಹೊಗಳುವ, ಜಪಿಸುವ ಚಿತ್ರರಂಗ ಅವರ ಆದರ್ಶವನ್ನು ಯಾಕೆ ಪಾಲಿಸುತ್ತಿಲ್ಲ ಅಥವಾ ಪ್ರೇರಣೆ ಪಡೆಯುತ್ತಿಲ್ಲ? ಹಾಗಾದರೆ ಇವರ ಹೊಗಳಿಕೆಗಳೆಲ್ಲ ತೋರಿಕೆಗೆ ಮಾತ್ರ ಸೀಮಿತವೇ? ಡಾ.ರಾಜ್‌ಕುಮಾರ್ ಎಷ್ಟು ಸಿನಿಮಾದಲ್ಲಿ ಸಿಗರೇಟ್ ಸೇದಿದ್ದರು? ಮದ್ಯದ ಬಾಟಲಿ ಹಿಡಿದಿದ್ದರು? ಎಷ್ಟು ಸಿನಿಮಾದಲ್ಲಿ ಮುಖದ ತುಂಬ ಗಡ್ಡ ಮೀಸೆ ತುಂಬಿಕೊಂಡಿದ್ದರು? ಎಷ್ಟು ಸಿನಿಮಾದಲ್ಲಿ ಮಚ್ಚು, ಮಷಿನ್ ಗನ್ ಹಿಡಿದಿದ್ದರು? ಎಷ್ಟು ಕಾರು ಸುಟ್ಟರು? ಅವರು ಅಭಿನಯಿಸಿದ ಇನ್ನೂರು ಚಿತ್ರಗಳ ಪೈಕಿ ಕುಟುಂಬ ಸಮೇತ ನೋಡಲಾಗದ, ಮಕ್ಕಳನ್ನು ಕರೆದುಕೊಂಡು ಹೋಗಬಾರದ ಸಿನಿಮಾಗಳ ಸಂಖ್ಯೆ ಎಷ್ಟು? ಅವರಾಗಲಿ, ಅವರ ನಿರ್ಮಾಪಕ, ನಿರ್ದೇಶಕರಾಗಲಿ ದಡ್ಡರೇ ಇರಬೇಕು ಅಲ್ಲವೇ? ಇದಕ್ಕೆಲ್ಲ ಯಾರೂ ಉತ್ತರಿಸುವುದಿಲ್ಲ.

ಹೋಗಲಿ, ಅವರ ಚಿತ್ರದ ಹೆಸರುಗಳಾದರೂ ಹೇಗಿರುತ್ತಿದ್ದವು? ಭಾಗ್ಯವಂತರು, ಕಾಮನ ಬಿಲ್ಲು, ಚಲಿಸುವ ಮೋಡಗಳು, ಹಾಲು ಜೇನು... ಹೆಸರು ನೋಡಿಯೇ ಸಿನಿಮಾಕ್ಕೆ ಹೋಗಬೇಕು ಅನ್ನಿಸುತ್ತಿತ್ತು. ಇಂದಿನ ಸಿನಿಮಾದ ಹೆಸರುಗಳು...? ಇಂದು ಜನ ಇದನ್ನು ಬಯಸುತ್ತಾರೆ ಎಂದು ಹೇಳಬೇಡಿ.

ಇದನ್ನೆಲ್ಲ ಜನ ಬಯಸುವುದೇ ಹೌದಾಗಿದ್ದರೆ, ಇಂದಿನ ಸಿನಿಮಾಗಳೆಲ್ಲ ಸೂಪರ್ ಹಿಟ್ ಆಗಬೇಕಿತ್ತಲ್ಲ? ಇನ್ನೂ ಎಷ್ಟು ದಿನ ಇದೇ ಭ್ರಮಾಲೋಕದಲ್ಲಿರಬೇಕು? ಇನ್ನೂ ಎಷ್ಟು ಕೈ ಸುಟ್ಟುಕೊಳ್ಳಬೇಕು? ತಮಗೆ ಸರಿ ಕಂಡದ್ದು ಜನ ಇಷ್ಟಪಡಬೇಕು ಎನ್ನುವುದು ಎಷ್ಟು ಸರಿ? ಕನ್ನಡ ಚಿತ್ರರಂಗದವರು ಒಂದು ತಿಳಿಯಬೇಕು. ಮೊದಲು, ಚಿತ್ರಮಂದಿರದಲ್ಲಿ ಸಿನಿಮಾ ನೋಡುವ ಕಾಲದಲ್ಲಿ ಸಿನಿಮಾ ಚೆನ್ನಾಗಿಲ್ಲದಿದ್ದರೆ ಮಧ್ಯಂತರದಲ್ಲಿ ಎದ್ದು ಹೋಗುತ್ತಿದ್ದರು.

ಈಗ ಜನ ಚಿತ್ರಮಂದಿರಕ್ಕೆ ಬರುವುದು ಕಡಿಮೆಯಾಗಿದೆ, ಓಟಿಟಿಯಲ್ಲಿ ಸಿನಿಮಾ ನೋಡುತ್ತಿದ್ದಾರೆ ಅಂದುಕೊಳ್ಳಿ. ಈಗ ಮಧ್ಯಂತರದವರೆಗೂ ಕಾಯಬೇಕಾಗಿಲ್ಲ. ರಿಮೋಟ್ ಕೈಯ ಇರುತ್ತದೆ ಎನ್ನುವುದು ಗೊತ್ತಿರಬೇಕು.

ಹೆಚ್ಚು ಹೇಳದೇ, ಒಂದು ಉದಾಹರಣೆಯೊಂದಿಗೆ ಮುಗಿಸುತ್ತೇನೆ. ಇಲ್ಲವಾದರೆ ನಾನು ಯಾರ ಪರ ವಕಾಲತ್ತು ಮಾಡಿದಂತೆ ಅನಿಸಬಹುದು. ಮಲಯಾಳಂ ನಟ ಮಮ್ಮೂಟಿಯ ಕಲಮ್ಕಾವಾಲ ಸಿನಿಮಾ ಇತ್ತೀಚೆಗೆ ತೆರೆಗೆ ಬಂತು. ಅದರ ಆಯ–ವ್ಯಯ ನೋಡುತ್ತಿದ್ದೆ. ಆ ಚಿತ್ರ ನಿರ್ಮಾಣಕ್ಕೆ ಮೂವತ್ತರಿಂದ ಮೂವತ್ತೈದು ಕೋಟಿ ರುಪಾಯಿ ಖರ್ಚಾಗಿದೆಯಂತೆ. ಸಿನಿಮಾ ನೋಡಿದರೆ ಅಷ್ಟು ಖರ್ಚಾಗಿರಲಿಕ್ಕಿಲ್ಲ ಅನ್ನಿಸಿತು. ಇರಲಿ, ನಿನ್ನೆಯವರೆಗೆ ಅದರ ಆದಾಯ ಎಂಬತ್ತು ಕೋಟಿ ದಾಟಿದೆ.

ಅದೇ ನಮ್ಮ ಕನ್ನಡದ 45, ಮಾರ್ಕ್, ಡೆವಿಲ್ ಚಿತ್ರಗಳ ಬಜೆಟ್ ಅದಕ್ಕಿಂತಲೂ ಹೆಚ್ಚು. ಆದರೆ ಗಳಿಕೆ? ಚಿರಂಜೀವಿ, ವೆಂಕಟೇಶ್ ನಟಿಸಿದ ತೆಲಗು ಚಿತ್ರ ಮನ ಶಂಕರ ವರಪ್ರಸಾದಗಾರು ಚಿತ್ರಕ್ಕೆ ಅರವತ್ತೈದು ಕೋಟಿ ಖರ್ಚಾಗಿದೆಯಂತೆ. ಚಿತ್ರದ ಗಳಿಕೆ ಈಗಾಗಲೇ ಮುನ್ನೂರ ಐವತ್ತು ಕೋಟಿ ದಾಟಿದೆ.

ಹಾಗಾದರೆ ಬೇರೆ ಭಾಷೆಯ ಚಿತ್ರಗಳು ಸೋಲುವುದೇ ಇಲ್ಲವೇ? ಖಂಡಿತ ಸೋಲುತ್ತವೆ. ಆದರೆ ಎಷ್ಟು ಚಿತ್ರ ನಿರ್ಮಾ ಣಗೊಳ್ಳುತ್ತದೆ, ಎಷ್ಟು ಗೆಲ್ಲುತ್ತದೆ, ಎಷ್ಟು ಸೋಲುತ್ತದೆ ಎಂದು ನೋಡಿ.

ಕನ್ನಡಕ್ಕಿಂತ ದಕ್ಷಿಣ ಭಾರತದ ಎಲ್ಲ ಭಾಷೆಯ ಚಿತ್ರಗಳ, ಮರಾಠಿ, ಗುಜರಾತಿ ಚಿತ್ರಗಳ ಯಶಸ್ಸಿನ ಸಂಖ್ಯೆ ಹೆಚ್ಚು ಎಂದಾದರೆ ಅದಕ್ಕೆ ಕಾರಣ ಹುಡುಕಬೇಡವೇ? ಕನ್ನಡದ ಮಾಸ್ ಹೀರೋಗಳು, ಸೂಪರ್ ಸ್ಟಾರ್‌ಗಳ ಸಿನಿಮಾಗಳನ್ನು ಗೆಲ್ಲಿಸಲು ಸಾಧ್ಯವಾಗುತ್ತಿಲ್ಲ ಎನ್ನುವ ಸಂದರ್ಭದಲ್ಲಿ ಅವರ ಹಿಂದೆ ಕೋಟಿ ಕೋಟಿ ಸುರಿಯುವ ಬದಲು, ಕೋಟಿಯ ಒಳಗೇ ಚಿತ್ರ ನಿರ್ಮಿಸಿ ಲಾಭಗಳಿಸುವುದು ಬುದ್ಧಿವಂತಿಕೆ ಅಲ್ಲವೇ? ಒಂದು ವೇಳೆ ನಷ್ಟವೇ ಆದರೂ ಸಣ್ಣದರಲ್ಲಿಯೇ ಹೋಯಿತು ಎಂಬ ಸಮಾಧಾನವಾದರೂ ಇರುತ್ತದಲ್ಲ? ಈ ಎಲ್ಲ ಕಥೆಗಳ ನಡುವೆ ನನಗೆ ನೋಡಲು ಸಿಕ್ಕಿದ್ದು ಯಾವ ಪ್ರಚಾರವೂ ಇಲ್ಲದೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಪಿ. ಶೇಷಾದ್ರಿ ನಿರ್ದೇಶನದ, ಪೋಸ್ಟರ್ ರಿಲೀಸ್, ಸಾಂಗ್ ರಿಲೀಸ್, ಟೀಸರ್ ರಿಲೀಸ್, ಯಾವುದೂ ಇಲ್ಲದ ರೂಬಿಕ್ಯೂಬ್ ಎಂಬ ಸಣ್ಣ ಬಜೆಟ್‌ನ ಅತ್ಯುತ್ತಮ ಚಿತ್ರ.

**– ಕಿರಣ್ ಉಪಾಧ್ಯಾಯ, ಬಹ್ರೈನ್**

# ಕಸ ಎಸೆಯುವ ಜಾಗದಲ್ಲಿ ಗಿಡಗಳ ನೆಟ್ಟ ಪ.ಪಂ.: ಪ್ರಶಂಸೆ

• ಪ್ರಜೋದಯ ವರದಿ

**ಆಲೂರು:** ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಬದಿ ಕೆಲವರು ಕಸ ಎಸೆಯುತ್ತಿದ್ದನ್ನು ಗಮನಿಸಿದ ಮುಖ್ಯಾಧಿಕಾರಿ ತಂಡದವರು, ಕಸವಿದ್ದ ಸ್ಥಳವನ್ನು ಶುಚಿಗೊಳಿಸಿ, ಆ ಸ್ಥಳದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ಪ್ರತಿದಿನ ಪ್ರತಿಯೊಂದು ಮನೆ ಬಳಿಗೆ ಕಸದ ವಾಹನ ಬರುತ್ತದೆ. ಅದರಲ್ಲಿ ಹಸಿ ಮತ್ತು ಒಣ ಕಸವೆಂದು ವಿಂಗಡಿಸಿ ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ತೆಗೆದುಕೊಂಡು ಹೋಗಿ ನಿಗಧಿಪಡಿಸಿರುವ ಕಾಂಪೋಸ್ಟ್ ಗುಂಡಿಗೆ ಹಾಕಿ ಉತ್ತಮ ಗೊಬ್ಬರ ವನ್ನು ತಯಾರಿಸುತ್ತಾರೆ.



ಆದರೆ ಬಹುತೇಕ ವಿದ್ಯಾವಂತ ಮತ್ತು ಪದವಿ ಪಡೆದ ನಾಗರೀಕರು, ತಮ್ಮ ಮನೆ ಬಳಿಗೆ ಕಸದ ವಾಹನ ಬಂದಾಗ ಕಸ ಕೊಡಲು ಸಾಧ್ಯವಾಗದೆ ತಾವು ಶಾಲೆ, ಕಾಲೇಜು, ಕಚೇರಿಗೆ ಹೋಗುವ ಸಂದರ್ಭದಲ್ಲಿ ರಸ್ತೆ ಯಂಚಿನಲ್ಲಿ ಬಿಸಾಡಿ ಹೋಗುತ್ತಾರೆ. ಇವರು ತಮ್ಮ ಮುಂದಿನ ಭವಿಷ್ಯ ವನ್ನು ಅರಿತಿಲ್ಲವೇ ಎಂಬುದು ಮಾತ್ರ ಪ್ರಶ್ನಾರ್ಥಕವಾಗಿದೆ.

ಅಲ್ಲಲ್ಲಿ ಬಿಸಾಡಿದ ಕಸವನ್ನು ಸಂಗ್ರಹಿಸುತ್ತಿದ್ದ ಪಂಚಾಯಿತಿ ಸಿಬ್ಬಂದಿಗಳು, ಇಲ್ಲಿ ಕಸ ಹಾಕಿದರೆ ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂಬ ನಾಮಫಲಕ ಹಾಕಿದರೂ ಬಿಸಾಡಿ ಹೋಗುತ್ತಿದ್ದಾರೆ. ಇಂತಹ ನಾಗರೀಕರು ಸಮಾಜಕ್ಕೆ ಕಂಟಕವಾಗಿದ್ದಾರೆ. ಇದನ್ನರಿತ ಮುಖ್ಯಾಧಿಕಾರಿ ಮಂಜುನಾಥ್ ಅವರು ತಮ್ಮ ತಂಡದೊಂದಿಗೆ ಕಸ ವಿಲೇವಾರಿ ಮಾಡಿ, ಆ ಸ್ಥಳದಲ್ಲಿ ಗಿಡಗಳನ್ನು ನೆಡಲು ಮುಂದಾಗಿರುವುದು ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

ಇತ್ತೀಚೆಗೆ ಇಡೀ ಭೂ ಮತ್ತು ವಾಯುಮಂಡಲವೂ ಸಹ ಕ್ರಿಮಿನಾಶಕಗಳಿಂದ ಕೂಡಿದ್ದು, ಉಸಿರಾಡಿದರೆ ರೋಗಕ್ಕೆ ತುತ್ತಾಗುತ್ತಿರುವುದರಿಂದ, ಕನಿಷ್ಠ ಭೂಮಿಯನ್ನು ಸ್ವಚ್ಛಗೊಳಿಸಿ ಉತ್ತಮ ಪರಿಸರ ಕಾಪಾಡಲು ಮುಂದಾದರೆ, ಮುಂದಿನ ಭವಿಷ್ಯ ಅರಿಯದ ಅನಾಗರೀಕರು ಕಸವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ಇಂತಹವರಿಗೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪಟ್ಟಣದಿಂದ ಹಾಸನ, ಭೈರಾಪುರ, ಕಣತೂರು, ಹಳೆ ಆಲೂರು, ಹುಣಸವಳ್ಳಿ ರಸ್ತೆಗಳಲ್ಲಿ ಅನಾಗರೀಕರು ರಸ್ತೆಯಂಚಿನಲ್ಲಿ ಕಸ ಎಸೆಯುತ್ತಿದ್ದಾರೆ ಎಂಬ ಆಕ್ರೋಶವಿದೆ.

> ಅಲ್ಲಲ್ಲಿ ಕಸ ಎಸೆಯುತ್ತಿದ್ದ ಸ್ಥಳವನ್ನು ಶುಚಿಗೊಳಿಸಿ ಆ ಸ್ಥಳದಲ್ಲಿ ಗಿಡಗಳನ್ನು ನೆಡುತ್ತಿದ್ದೇವೆ. ಗೌಪ್ಯವಾಗಿ ಸಿಸಿ ಟಿವಿ ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಕಸ ಬಿಸಾಡಿದವರನ್ನು ಗುರುತಿಸಿ, ಕ್ರಿಮಿನಲ್ ಪ್ರಕರಣ ದಾಖಲಿಸುವ ಮೂಲಕ ಕ್ರಮ ಕೈಗೊಳ್ಳಲಾಗುವುದು.
> - ಮಂಜುನಾಥ್, ಮುಖ್ಯಾಧಿಕಾರಿ, ಪ. ಪಂ. ಆಲೂರು.

> ಬಹುತೇಕ ವಿದ್ಯಾವಂತರೆ ರಸ್ತೆಗಳಲ್ಲಿ ಕಸ ಬಿಸಾಡುತ್ತಿದ್ದಾರೆ. ಪ. ಪಂ. ಗಿಡಗಳನ್ನು ನೆಡುತ್ತಿರುವುದು ಶುಚಿತ್ವಕ್ಕೆ ಉತ್ತಮ ಸಂಕೇತ. ಇದಕ್ಕೆ ನಾಗರೀಕರು ಸ್ಪಂದಿಸಬೇಕು. ಕಸ ಬಿಸಾಡಿದವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕು.
> - ಮಲ್ಲಿಕಾರ್ಜುನ, ಆಲೂರು.

# ಸುಂಕ ಇಳಿಕೆಯಿಂದ ಮೇಕ್ ಇನ್ ಇಂಡಿಯಾಗೆ ಮತ್ತಷ್ಟು ಬಲ; ವಿದೇಶಾಂಗ ಸಚಿವ ಜೈಶಂಕರ್

• ಪ್ರಜೋದಯ ವರದಿ

ನವದೆಹಲಿ: ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವನ್ನು ಸ್ವಾಗತಿಸಿದ್ದು, ಇದು ಎರಡೂ ಆರ್ಥಿಕತೆಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ದೇಶದ ಮೇಕ್ ಇನ್ ಇಂಡಿಯಾ ಪ್ರಯತ್ನಗಳನ್ನು ಬಲಪಡಿಸುತ್ತದೆ ಎಂದು ಹೇಳಿದ್ದಾರೆ.

ನಿರ್ಣಾಯಕ ಖನಿಜ ಪೂರೈಕೆ ಸರಪಳಿಯ ಕುರಿತು ವಾಷಿಂಗ್ಟನ್ ನೇತೃತ್ವದ ಸಚಿವರ ಸಭೆಯಲ್ಲಿ ಭಾಗವಹಿಸಲು ಅಮೆರಿಕಕ್ಕೆ ಮೂರು ದಿನಗಳ ಭೇಟಿ ನೀಡಿರುವ ಜೈಶಂಕರ್ ಅವರು, ದ್ವಿಪಕ್ಷೀಯ ವ್ಯಾಪಾರದ ಕುರಿತಾದ ಪ್ರಕಟಣೆಗಳನ್ನು ಸ್ವಾಗತಿಸುತ್ತೇನೆ ಎಂದು ಹೇಳಿದರು.

ಭಾರತ ಮತ್ತು ಅಮೆರಿಕಗಳು ವ್ಯಾಪಾರ ಒಪ್ಪಂದಕ್ಕೆ ಒಪ್ಪಿಕೊಂಡಿವೆ, ಅದರ ಅಡಿಯಲ್ಲಿ ವಾಷಿಂಗ್ಟನ್ ಭಾರತೀಯ ಸರಕುಗಳ ಮೇಲಿನ ಪರಸ್ಪರ ಸುಂಕವನ್ನು ಪ್ರಸ್ತುತ ಶೇಕಡಾ 25 ರಿಂದ ಶೇಕಡಾ 18 ಕ್ಕೆ ಇಳಿಸುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ದೂರವಾಣಿ ಸಂಭಾಷಣೆಯ ನಂತರ ಹೇಳಿದರು ಎಂದು ಹರ್ಷ ವ್ಯಕ್ತಪಡಿಸಿದರು.



ಇದು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತದೆ, ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಎರಡೂ ಆರ್ಥಿಕತೆಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸುತ್ತದೆ. ಮತ್ತು ಮೇಕ್ ಇನ್ ಇಂಡಿಯಾ ಪ್ರಯತ್ನಗಳನ್ನು ಬಲಪಡಿಸುತ್ತದೆ ಮತ್ತು ವಿಶ್ವಾಸಾರ್ಹ ತಂತ್ರಜ್ಞಾನ ಸಂಬಂಧಗಳನ್ನು ಪ್ರೋತ್ಸಾಹಿಸುತ್ತದೆ ಎಂದು ಅವರು ಎಕ್ಸ್ ಮಾಡಿದ್ದಾರೆ.

ನಮ್ಮ ಆರ್ಥಿಕ ನಿಶ್ಚಿತಾರ್ಥದಲ್ಲಿನ ಅವಕಾಶಗಳು ನಿಜವಾಗಿಯೂ ವಿಶಾಲವಾಗಿವೆ ಮತ್ತು ಅವುಗಳನ್ನು ಸಾಕಾರಗೊಳಿಸುವ ವಿಶ್ವಾಸ ನಮಗಿದೆ. ಬಲವಾದ ಆರ್ಥಿಕ ಸಂಬಂಧವು ನಮ್ಮ ಕಾರ್ಯತಂತ್ರದ ಪಾಲುದಾರಿಕೆಗೆ ಬಲವಾದ ಅಡಿಪಾಯವಾಗಿದೆ ಎಂದು ವಿದೇಶಾಂಗ ಸಚಿವ ಹೇಳಿದರು.

ವ್ಯಾಪಾರ ಒಪ್ಪಂದದ ಘೋಷಣೆಯ ನಂತರ, ಪ್ರಧಾನಿ ಮೋದಿ ಅವರು ಭಾರತದಲ್ಲಿ ತಯಾರಾದ ಉತ್ಪನ್ನಗಳು ಈಗ ಶೇಕಡಾ 18 ರಷ್ಟು ಕಡಿಮೆ ಸುಂಕವನ್ನು ಹೊಂದಿರುತ್ತವೆ ಎಂದು ಸಂತೋಷಪಟ್ಟರು.

# ಭಾರತೀಯರಿಂದ ಸ್ವಾರ್ಥವಿಲ್ಲದ ಜಗತ್ತು ನಿರ್ಮಾಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸ್ವಾರ್ಥವಿಲ್ಲದ ಜಗತ್ತು ನಿರ್ಮಾಣ ಮಾಡುವವರು ಭಾರತೀಯರು ಎಂದು ನಿವೃತ್ತ ಎಂಜಿನಿಯರ್ ಹಾಗೂ ವಾಗ್ಮಿ ಗೋವಿಂದ್ ದಿಕ್ಕೂಚಿ ಹೇಳಿದರು.

ಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲಾ ಆವರಣದಲ್ಲಿ ನಡೆದ ಹಿಂದೂ ಸಮಾಜೋತ್ಸವ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿ, ತಾಯಂದಿರ ಮೂಲಕ ಉತ್ತಮ ಸಂಸ್ಕಾರ, ಸಂಸ್ಕೃತಿ ಬೆಳೆಯಲು ಸಾಧ್ಯವಾಗುತ್ತದೆ. ಜೀಜಾಬಾಯಿ ತನ್ನ ಮಗ ಶಿವಾಜಿಗೆ ಮಾರ್ಗದರ್ಶನ ಮಾಡಿದ್ದನ್ನು ಸ್ಮರಿಸಿದರು.

ಸಂಸ್ಕಾರ ಸಂಸ್ಕೃತಿ ಇಲ್ಲದಿದ್ದರೆ ಮನುಷ್ಯ ಪ್ರಾಣಿಗೆ ಸಮನಾಗುತ್ತಾನೆ. ನಾವಿಂದು ಕರ್ತವ್ಯ ಮರೆಯುತ್ತಿದ್ದೇವೆ, ಕೊರೊನಾ ಸಂದರ್ಭದಲ್ಲಿ ಭಾರತ ದೇಶ ಔಷಧಿಯನ್ನು ಸಿದ್ಧಪಡಿಸಿ ಉಚಿತವಾಗಿ ಹಂಚಿದ್ದು ನಮ್ಮ ಮನೋಭಾವವನ್ನು ತಿಳಿಸುತ್ತದೆ. ಇದುವೇ ಭಾರತೀಯರ ದೃಷ್ಟಿಕೋನವಾಗಿದೆ. ನಮ್ಮ ಭಾಷೆ, ಉಡುಪು ಬಗ್ಗೆ ನಮಗೆ ಹೆಮ್ಮೆ ಇರಬೇಕು. ನಮ್ಮ ಚಿಂತನೆ ದೃಷ್ಟಿಕೋನಕ್ಕೆ ತಾಯಿ ಮೂಲ ಕಾರಣವಾಗುತ್ತಾಳೆ ಎಂದರು.



ಭರತನಾಟ್ಯ ಕಲಾವಿದೆ ಡಾ. ರಮ್ಯಾ ಸೂರಜ್ ಮಾತನಾಡಿ, ತಾಯಿ ನೀಡುವ ಸಂಸ್ಕಾರವೇ ಮಗುವಿಗೆ ಪ್ರೇರಣೆ ಆಗುತ್ತದೆ. ಸ್ವದೇಶಿ ಭಾವನೆ ನಮಗೆ ಅಗತ್ಯವಿದೆ. ಆರೋಗ್ಯ ಪರಿಸರ ರಕ್ಷಣೆ ಒಟ್ಟು ಕುಟುಂಬದ ಕಲ್ಪನೆ ಮೂಲಕ ಹಿಂದೂ ಸಮಾಜ ಬಲಿಷ್ಠಗೊಳ್ಳಬೇಕು ಎಂದರು.

ನುಗ್ಗೇಹಳ್ಳಿ ರಂಭಾಪುರಿ ಶಾಖಾ ಮಠದ ಮಹೇಶ್ವರ ಸ್ವಾಮೀಜಿ, ಪ್ರಭಾವದಿಂದ ಧರ್ಮದರ್ಶನದ ಗೋಚರವಾಗುತ್ತಿಲ್ಲ ಎಂದರು.

ಸಮಿತಿಯ ಅಧ್ಯಕ್ಷ ಶಿವಶಂಕರ್, ತಾರಾ, ಪ್ರಭಾಕರ್, ರೂಪ, ಮನೋಹರ್ ಗಜಾನನ, ಶೇಷಶಯನ, ಎಚ್. ಎಂ.ನಾಗಪ್ಪ, ಪ್ರಶಾಂತ್ ಮುಳ್ಕೆರೆ, ಬಾಸ್ಕರಚಾರ್, ಯಶೋದ ಜೈನ್ ಸೇರಿದಂತೆ ಹಿಂದೂ ಸಮಾಜದ ಪ್ರಮುಖರು ಹಾಜರಿದ್ದರು.


# ಗ್ರಾಮ ಪಂಚಾಯಿತಿಗಳೇ ಗ್ರಾಮೀಣ ಭಾಗದ ಗ್ರಾಮ ಸರ್ಕಾರಗಳು

## ಗ್ರಾ.ಪಂ. ನಿರ್ಣಯಗಳೇ ಅಂತಿಮ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಆಲೂರು:** ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯಿತಿಗಳೇ ಸರ್ಕಾರವಾಗಿದ್ದು ಗ್ರಾಮ ಪಂಚಾಯಿತಿಗಳು ತೆಗೆದುಕೊಳ್ಳುವ ನಿರ್ಣಯಗಳೇ ಅಂತಿಮವಾಗಿರುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಕಸಬಾ ಭೈರಾಪುರ ಗ್ರಾಮ ಪಂಚಾಯಿತಿ ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ರೈತರು, ಕಾರ್ಮಿಕರು, ಬಡವರು, ದೀನ ದಲಿತರು ತಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮ ಪಂಚಾಯಿತಿಗಳನ್ನು ಅವಲಂಬಿಸಿರುತ್ತಾರೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳಾದ ನಾವು ಜನರಿಗೆ ಸೇವೆಯನ್ನು ನೀಡುವ ಮೂಲಕ ಅವರುಗಳ ಋಣವನ್ನು ತೀರಿಸುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ ಎಂದರು.



ಜನಪ್ರತಿನಿಧಿಗಳಲ್ಲದೆ ಅಧಿಕಾರಿಗಳು ಸಹ ಸಾರ್ವಜನಿಕರ ಕೆಲಸಗಳನ್ನು ವಿಳಂಬವಿಲ್ಲದೆ ಮಾಡಿಕೊಡುವುದರಿಂದ ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವುದು ತಪ್ಪುತ್ತದೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿವರ್ಗವು ಒಂದೇ ನಾಣ್ಯದ ಎರಡು ಮುಖದಂತೆ ಕಾರ್ಯ ನಿರ್ವಹಿಸ ಬೇಕು ಎಂದು ಹೇಳಿದರು.

ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಕೆ.ಎಸ್ ಮಂಜೇಗೌಡ ಮಾತನಾಡಿ, ಭೈರಾಪುರ ಗ್ರಾಮ ಪಂಚಾಯಿತಿ ಹಿಂದಿನಿಂದಲೂ ರಾಜಕೀಯವಾಗಿ ದೊಡ್ಡ ಸುದ್ದಿಯಲ್ಲಿರುತ್ತದೆ. ಮುಂದೆ ಬರುವ ಹೊಸ ಆಡಳಿತ ಮಂಡಳಿಯು ಉತ್ತಮವಾದ ಆಡಳಿತವನ್ನು ಜನ ಸಾಮಾನ್ಯರಿಗೆ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹೇಮಾ ಮಂಜೇಗೌಡ, ಉಪಾಧ್ಯಕ್ಷೆ ಸವಿತಾ ರಂಗಸ್ವಾಮಿ, ಸದಸ್ಯರುಗಳಾದ ಪುಟ್ಟ ಗೌರಮ್ಮ, ಡಿ.ಎಸ್ ನಂಜುಂಡಪ್ಪ, ನಾಗರತ್ನ, ಗಣೇಶ್ ಸ್ನೇಹಜೀವಿ, ಮೋಹನ್ ಕುಮಾರ್, ಹಾಸನ ಕೆಎಂಎಫ್ ನಿರ್ದೇಶಕ ಪಿ.ಎಲ್ ನಿಂಗರಾಜು, ತಾ.ಪಂ ಮಾಜಿ ಸದಸ್ಯ ಸಿ.ವಿ ಲಿಂಗರಾಜು, ಮಾಜಿ ಅಧ್ಯಕ್ಷೆ ಪುಷ್ಪ, ಸಿ.ಡಿ.ಅಶೋಕ್, ವೀರಭದ್ರ ಸ್ವಾಮಿ, ಎಚ್.ವಿ. ನಂದೀಶ್ ಗೌಡ, ಮಾಜಿ ಸದಸ್ಯರುಗಳಾದ ನಂಜೇಶ್, ಮಲ್ಲೇಶ್, ಬಾಲಲೋಚನ, ಜಯ ರಾಮ್, ಮುಖಂಡರಾದ ಬಿ.ಸಿ ಶಂಕರಾಚಾರ್, ಕೃಷ್ಣೇಗೌಡ, ರಾಜೇ ಗೌಡ, ಗಿರೀಶ್, ಶಶಿಧರ್, ಮಹಾಂತೇಶ್ ಇತರರಿದ್ದರು.

# ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ಏಕಾಗ್ರತೆ, ಆಸಕ್ತಿ ಮುಖ್ಯ: ಜಿಲ್ಲಾಧಿಕಾರಿ

## ಪದವಿ ಪಡೆಯುವ ಮುನ್ನವೇ ಮುಂದಿನ ಆಯ್ಕೆ ಇರಲಿ

• ಪ್ರಜೋದಯ ವರದಿ

**ಹಾಸನ:** ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ಏಕಾಗ್ರತೆ ಮತ್ತು ಆಸಕ್ತಿ ಮುಖ್ಯವಾಗಿದ್ದು, ಶ್ರಮಪಟ್ಟು ಓದಿದರೆ ಮಾತ್ರ ಯಶಸ್ಸು ಕಾಣಬಹುದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆದ ಸಮಾಜ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ/ವರ್ಗದ ನೌಕರರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಕುರಿತು ಒಂದು ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರ ಜೀವನದಲ್ಲಿಯೂ ಸಾಧನೆ ಎಂಬುದು ಕಷ್ಟಕರದ ದಾರಿಯಾಗಿರುತ್ತದೆ. ಶ್ರಮ ಮತ್ತು ಶ್ರದ್ಧೆ ಸಾಧನೆಯ ಭಾಗವಾಗಿದೆ, ಪದವಿ ಪಡೆಯುವ ಮುನ್ನವೇ ನಾವು ಮುಂದೆ ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಿರಬೇಕು ಎಂದರು.



ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸುವ ವಿದ್ಯಾರ್ಥಿಗಳು ಮಾನಸಿಕವಾಗಿ ಪರೀಕ್ಷೆ ಎದುರಿಸಲು ಸಿದ್ದವಾಗಿರಬೇಕು. ಶ್ರಮ ಪಟ್ಟು ಅಧ್ಯಯನ ನಡೆಸಬೇಕು ಆಗ ಮಾತ್ರ ಉದ್ಯೋಗವನ್ನು ಪಡೆಯಬಹುದು ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ಮುನ್ನ ವೇಳಾಪಟ್ಟಿಯನ್ನು ರಚಿಸಿಕೊಳ್ಳಬೇಕು. ನಂತರ ಯಾವ ಹುದ್ದೆಗೆ ನಾವು ತಯಾರಿ ಮಾಡಿಕೊಳ್ಳಬೇಕು ಎಂಬ ನಿರ್ಧಾರ ಮಾಡಬೇಕು, ಸಮಯ ನಿರ್ವಹಣೆ ಮಾಡಿಕೊಂಡು ಪರೀಕ್ಷೆಗೆ ಸಿದ್ದತೆ ಮಾಡಬೇಕು, ಜೀವನದಲ್ಲಿ ಶಿಸ್ತು ಮುಖ್ಯವಾಗಿರುತ್ತದೆ ಶಿಸ್ತು ಶ್ರದ್ಧೆ ಯಿಂದ ಗುರಿ ಸಾದಿಸಬಹುದು ಎಂದು ಹೇಳಿದರು.

ತರಬೇತಿ ಸಂಸ್ಥೆಗಳಿಗೆ ಶುಲ್ಕ ಪಾವತಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುತ್ತಿದ್ದಾರೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಕಾರ್ಯಾಗಾರವನ್ನು ಆಯೋಜಿಸಿದ್ದಾರೆ. ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಪಿ.ವಿ.ಬೈರಪ್ಪ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳಿಗೆ ಹಂತಗಳನ್ನು ಸುಧೀರ್ಘವಾಗಿ ವಿವರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಯೋಜನಾಧಿಕಾರಿ ಮಹೇಶ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ. ಎನ್.ಆರ್.ಪುರುಷೋತ್ತಮ, ಪ್ರಭಾರ ಅಪರ ಜಿಲ್ಲಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿನಡೆಸುವ ಕುರಿತು ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್‌ಪೀರ್.ಪಿ. ಮತ್ತಿತರರು ಉಪಸ್ಥಿತರಿದ್ದರು.



## ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ ಪಾಕ್ಷಿಕ ಆಂದೋಲನ

**ಹಾಸನ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ ಪಾಕ್ಷಿಕ ಆಂದೋಲನ 2026ರ ಜಾಥಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಾಲನೆ ನೀಡಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ, ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವಿಜಯ ಗೊರೂರು ಸೇರಿದಂತೆ ಇನ್ನೂ ಮುಂತಾದವರು ಭಾಗವಹಿಸಿದ್ದರು.**

# ಮೂಢನಂಬಿಕೆಗಳು ಮಾನವ ಪ್ರಗತಿಗೆ ಮಾರಕ

• ಪ್ರಜೋದಯ ವರದಿ

**ಹಾಸನ:** ಮೂಢನಂಬಿಕೆಗಳು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಪ್ರಗತಿಗೆ ಗಂಭೀರ ಅಡ್ಡಿಯಾಗುತ್ತಿವೆ. ಮೂಢನಂಬಿಕೆಗಳ ಕಾರಣದಿಂದ ಮನುಷ್ಯ ಮೋಸ ಹೋಗುತ್ತಿದ್ದು, ತನ್ನ ಅಮೂಲ್ಯ ಸಮಯ, ಹಣ ಹಾಗೂ ಚಿಂತನಾ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾನೆ ಎಂದು ಬಿಜಿವಿಎಸ್ ಹಾಸನ ಜಿಲ್ಲಾ ಸಹ ಕಾರ್ಯದರ್ಶಿ ಬಿ.ಆರ್.ಜಾನಕಿ ಅವರು ಅಭಿಪ್ರಾಯಪಟ್ಟರು.

ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಸನ ತಾಲ್ಲೂಕು ಸಮಿತಿಯು ಸರ್ಕಾರಿ ಪ್ರೌಢಶಾಲೆ, ಹೌಸಿಂಗ್ ಬೋರ್ಡ್, ಕುವೆಂಪುನಗರ, ಹಾಸನದಲ್ಲಿ ಆಯೋಜಿಸಲಾಗಿದ್ದ ವೈಜ್ಞಾನಿಕ ಮನೋವೃತ್ತಿ ಮತ್ತು ಮೂಢನಂಬಿಕೆಗಳು ಎಂಬ ವಿಷಯದ ಕುರಿತ ಪಿಪಿಟಿ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಹುತೇಕ ಮೂಢನಂಬಿಕೆಗಳಿಗೆ ದೇವರು ಅಥವಾ ಧರ್ಮದೊಂದಿಗೆ ಯಾವುದೇ ನೇರ ಸಂಬಂಧವಿಲ್ಲ. ವಿಶ್ವದ ಭೌತಿಕ ನಿಯಮಗಳ ಆಧಾರದಲ್ಲಿ ಮೂಢನಂಬಿಕೆಗಳಿಗೆ ಕಾರಣ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದರು.



ವಿದ್ಯಾರ್ಥಿ ದಿಸೆಯಲ್ಲೇ ನಂಬಿಕೆ ಹಾಗೂ ಮೂಢನಂಬಿಕೆ ಕುರಿತ ವಿಮರ್ಶಾತ್ಮಕ ಜ್ಞಾನ ಬೆಳಸಿಕೊಳ್ಳುವುದು ಹೇಗೆಂದು ಉದಾಹರಣೆಗಳ ಮೂಲಕ ತಿಳಿಸಿ ನಮ್ಮ ನಡುವೆ ಇರುವ ಒಂದೊಂದೇ ಮೂಢನಂಬಿಕೆಗಳನ್ನು ಪ್ರಯೋಗಕ್ಕೊಳಪಡಿಸಿ ಸ್ವ-ವಿಮರ್ಶೆಯಿಂದ ತಿಳಿದು ವೈಜ್ಞಾನಿಕ ವ್ಯಕ್ತಿತ್ವ ರೂಪಿಸಿಕೊಳ್ಳಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಸಂವಾದದಲ್ಲಿ ಭಾಗವಹಿಸಿ, ಪ್ರಶ್ನೋತ್ತರಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ವೈಜ್ಞಾನಿಕ ಮನೋವೃತ್ತಿಯ ಅಗತ್ಯತೆಯ ಕುರಿತು ಬಿಜಿವಿಎಸ್ ಹಾಸನ ತಾಲ್ಲೂಕು ಕಾರ್ಯದರ್ಶಿ ಹಾಗೂ ಶಿಕ್ಷಕರಾದ ಬಿ.ಕೆ.ಲೋಲಾಕ್ಷಿ ಅವರು ವಿದ್ಯಾರ್ಥಿಗಳಿಗೆ ತಿಳಿಸಿ ಇಂಗ್ಲೀಷಿನ ಐದು ಡಬಲ್ಯು ಒಂದು ಎಚ್ ಈ ಸೂತ್ರಗಳನ್ನು ಜೀವನದಲ್ಲಿ ಸಂಭವಿಸುವ ಪ್ರತಿಘಟನೆಗಳಿಗೂ ಅನ್ವಯಿಸಿ ಅವುಗಳ ಹಿಂದೆ ಇರುವ ವೈಜ್ಞಾನಿಕ ಜ್ಞಾನ ತಿಳಿದುಕೊಳ್ಳುವುದು ಅತ್ಯಗತ್ಯವೆಂದು ತಿಳಿಸಿ ಅವನ್ನೇ ಜೀವನದ ಮಾರ್ಗದರ್ಶನ ಮಾಡಿಕೊಳ್ಳಲು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ರಾಧಾ ಎನ್.ಎಸ್. ಸೇರಿದಂತೆ ಶಿಕ್ಷಕರಾದ ಮೀನಾ ಎಸ್. ಆರ್., ಮೀನಾಕ್ಷಿ ಆರ್., ರಶ್ಮಿ ಎಂ.ಆರ್., ರವೀಂದ್ರ ಜಿ.ಜಿ., ಚನ್ನನ ಹಾಗೂ ಬೋರಮ್ಮ ಅವರು ಉಪಸ್ಥಿತರಿದ್ದರು.

# ಸಮಾಜಕ್ಕೆ ದಾರಿ ತೋರಿದ ಶ್ರೀ ಸವಿತಾ ಮಹರ್ಷಿ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಸವಿತಾ ಸಮಾಜ ಸಹಕಾರ ಸಂಘದ ವತಿಯಿಂದ ಶ್ರೀ ಸವಿತಾ ಮಹರ್ಷಿಗಳ ಜಯಂತಿ ಹಾಗೂ ಬಿಜ್ಜಳ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಪಂಪ್ ಹೌಸ್ ರಸ್ತೆಯಲ್ಲಿರುವ ಸವಿತಾ ಸಮಾಜ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸವಿತಾ ಮಹರ್ಷಿಗಳು ಹಾಗೂ ಬಿಜ್ಜಳ ಮಹಾರಾಜರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಅರ್ಪಿಸಲಾಯಿತು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರು ಮಾತನಾಡಿ, ಶ್ರೀ ಸವಿತಾ ಮಹರ್ಷಿಗಳು ಶ್ರಮ, ಸೇವೆ ಮತ್ತು ಶಿಸ್ತುಗಳ ಮೂಲಕ ಸಮಾಜಕ್ಕೆ ದಾರಿ ತೋರಿದ ಮಹಾನ್ ವ್ಯಕ್ತಿಯಾಗಿದ್ದು, ಇಂದಿನ ಯುವಜನರು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಏಕತೆ ಅಗತ್ಯವಿದ್ದು, ಪುರಸಭೆ ವತಿಯಿಂದ ಸಾಧ್ಯವಾದ ಎಲ್ಲಾ ಸಹಕಾರವನ್ನು ನೀಡಲಾಗುವುದು ಎಂದರು.



ಪುರಸಭೆಯ ಮಾಜಿ ಅಧ್ಯಕ್ಷೆ ಹಾಗೂ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಶ್ರೀ ಸವಿತಾ ಮಹರ್ಷಿಗಳು ಶ್ರಮ, ಸೇವೆ ಹಾಗೂ ಶಿಸ್ತುಗಳ ಮಹತ್ವವನ್ನು ಸಮಾಜಕ್ಕೆ ಸಾರಿದ ಮಹಾನ್ ಸಂತರು. ವೇದಗಳ ಕಾಲದಲ್ಲೇ ಇದ್ದ ಸವಿತಾ ಮಹರ್ಷಿಗಳು ಸಾಮವೇದ ರಚನೆಗೆ ಕಾರಣ ಕರ್ತರಾಗಿದ್ದು, ಸವಿತಾ ಸಮಾಜದ ಗುರುಗಳಾಗಿ ಇಂದಿಗೂ ಪೂಜ್ಯರಾಗಿದ್ದಾರೆ ಎಂದು ಸ್ಮರಿಸಿದರು.

ಅದೇ ರೀತಿ ಬಿಜ್ಜಳ ಮಹಾರಾಜರು ಸಾಮಾಜಿಕ ನ್ಯಾಯ, ಆಡಳಿತ ಶಿಸ್ತು ಹಾಗೂ ಸಮಾನತೆಯ ಪ್ರತೀಕವಾಗಿದ್ದರು. ಸವಿತಾ ಸಮಾಜದ ಏಕತೆ, ಶೈಕ್ಷಣಿಕ ಪ್ರಗತಿ ಹಾಗೂ ಯುವಜನರಲ್ಲಿ ಸಮಾಜದ ಇತಿಹಾಸ ಮತ್ತು ಸಂಸ್ಕೃತಿಯ ಅರಿವು ಮೂಡಿಸುವುದು ಅತ್ಯಂತ ಅಗತ್ಯವಿದೆ. ಸವಿತಾ ಸಮಾಜವು ಕೇವಲ ಕ್ಷೌರಿಕ ವೃತ್ತಿಗೆ ಮಾತ್ರ ಸೀಮಿತವಾಗದೆ, ನಾದಸ್ವರ ಸಂಗೀತ ಸೇರಿದಂತೆ ವಿವಿಧ ಸೇವಾ ವೃತ್ತಿಗಳ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದೆ ಎಂದರು.

ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ಬಿ.ಎಂ.ಸಂತೋಷ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದಿನೇಶ್, ಸಹಕಾರ ಸಂಘದ ಅಧ್ಯಕ್ಷ ನರಸಿಂಹಸ್ವಾಮಿ, ಉಪಾಧ್ಯಕ್ಷ ವಸಂತ್, ನಿರ್ದೇಶಕರಾದ ಚಂದ್ರು, ಮೋಹನ್, ವಿಷ್ಣು ಪ್ರಸಾದ್, ಅನಿಲ್, ಶೀಲಾ ಇನ್ನಿತರರಿದ್ದರು.

## ಇಂದು ಆಯವ್ಯಯ ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಇಲ್ಲಿನ ಪುರಸಭೆ ಕಚೇರಿಯ ಹೆಚ್.ಡಿ.ದೇವೇಗೌಡರ ಸಭಾಂಗಣದಲ್ಲಿ ಪೆ.4 ರಂದು ಬೆಳಗ್ಗೆ 9 ಗಂಟೆಗೆ ಉಪ ವಿಭಾಗಾಧಿಕಾರಿಗಳು ಹಾಗೂ ಪುರಸಭೆ ಹೊಳೆನರಸೀಪುರ ಆಡಳಿತಾಧಿಕಾರಿ ಜಗದೀಶ್ ಗಂಗಣ್ಣನವರ್ ಅಧ್ಯಕ್ಷತೆಯಲ್ಲಿ 2026-27ನೇ ಸಾಲಿನ ಅಂದಾಜು ಆಯವ್ಯಯ ಪೂರ್ವಭಾವಿ ಸಭೆಯನ್ನು ಕರೆಯಲಾಗಿದ್ದು, ಸಾರ್ವಜನಿಕರು ಸಲಹೆ ಸೂಚನೆ ನೀಡಬಹುದಾಗಿದೆ.

# ವಿಕಲಚೇತನರಿಂದ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕು, ಗ್ರಾಮ ಪಂಚಾಯಿತಿ, ನಗರಸಭೆಗಳಲ್ಲಿ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗೌರವಧನ ಆಧಾರದ ಗ್ರಾಮೀಣ/ನಗರ ಪುನರ್ವಸತಿ ಕಾರ್ಯಕರ್ತೆಯರ ಗ್ರಾಮ- ನಗರ ಪಂಚಾಯಿತಿ-ನಗರಸಭೆಗಳಲ್ಲಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆಸಕ್ತ ಭಾಗಶಃ ಅಂಗವಿಕಲತೆ ಹೊಂದಿರುವ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು(ಎಂ.ಆರ್.ಡಬ್ಲ್ಯೂ) ರವರಿಂದ ಅರ್ಜಿಯನ್ನು ಪಡೆದು ಎಲ್ಲಾ ದಾಖಲಾತಿಗಳೊಂದಿಗೆ ಸಿದ್ದಪಡಿಸಿ ಸಂಬಂಧಪಟ್ಟ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳಿಗೆ (ಎಂ.ಆರ್.ಡಬ್ಲ್ಯೂ) ಮಾ.2 ರೊಳಗೆ ಸಲ್ಲಿಸಬಹುದಾಗಿದೆ

ಅರ್ಜಿಗಳನ್ನು ತಾಲ್ಲೂಕು ಆಯ್ಕೆ ಸಮಿತಿ ಪರಿಶೀಲಿಸಿ, ನಿಯಮಾನುಸಾರ ಸಂದರ್ಶನದ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲ್ಲೂಕು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, 9ನೇ ಕ್ರಾಸ್, ಕೆ.ಆರ್.ಪುರಂ. ಹಾಸನ. ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ರಥಕ್ಕೆ ದವನ, ಬಾಳೆಹಣ್ಣು ಎಸೆದು ಪರವಶರಾದ ಭಕ್ತರು | ಜನರ ಗಮನಸೆಳೆದ ಸಾಂಸ್ಕೃತಿಕ ಕಾರ್ಯಕ್ರಮಗಳು

# ವಿಜೃಂಭಣೆಯಿಂದ ನಡೆದ ಚಂದ್ರಮೌಳೇಶ್ವರ ರಥೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಆರಾಧ್ಯ ದೈವ ಕೋಟೆ ಚಂದ್ರಮೌಳೇಶ್ವರ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನರವೇರಿತು.

ಮುಂಜಾನೆ ಸುಪ್ರಭಾತ ಸೇವೆ ಮೂಲಕ ದೇವಾಲಯದಲ್ಲಿನ ಮೂಲ ವಿಗ್ರಹಕ್ಕೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಶಿವನ ಪಾರಾಯಣ, ಬಿಲ್ವಾಪತ್ರಾರ್ಚನೆ ಮಾಡಿದ ನಂತರ ವಿವಿಧ ಬಗೆಯ ಪುಷ್ಪಗಳಿಂದ ವಿಶೇಷವಾಗಿ ದೇವರಿಗೆ ಅಲಂಕಾರ ಮಾಡಲಾಯಿತು. ಅಡ್ಡೆಯಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯನ್ನು ಮಂಗಳ ವಾಧ್ಯದೊಂದಿಗೆ ಮೆರವಣಿಗೆ ಮೂಲಕ ದೇವಾಲಯವನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿದರು.

ನಂತರ ಉತ್ಸವ ದೇವರನ್ನು ಕೋಟೆ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಕೋಟೆ ಬಡಾವಣೆಯಲ್ಲಿ ಭಕ್ತರು ತಮ್ಮ ಮನೆ ಮುಂಭಾಗ ಶುಚಿ ಮಾಡಿ ನೀರಿನಿಂದ ಸ್ವಚ್ಛಗೊಳಿಸಿ ರಂಗೋಲಿ ಬಿಟ್ಟು ದೇವರನ್ನು ಬರಮಾಡಿಕೊಂಡರು. ದೇವರು ತಮ್ಮ ಮನೆ ಬಾಗಿಲಿಗೆ ಆಗಮಿಸಿದಾಗ ಹಣ್ಣು-ಕಾಯಿ ನೀಡಿ ಪೂಜೆ ಮಾಡಿಸಿದರು, ಇದಾದ ಬಳಿಕ ಉತ್ಸವ ದೇವರು ಚಂದ್ರಮೌಳೇಶ್ವರ ದೇವಾಲಯದ ಸಮೀಪಕ್ಕೆ ಕರೆತಂದು ಅಲಂಕೃತ ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.



ಉತ್ಸವ ದೇವರು ರಥಕ್ಕೆ ಪ್ರತಿಷ್ಠಾಪನೆಯಾದ ಮೇಲೆ ರಥಕ್ಕೆ ಬಲಿ ನೀಡಿ, ಮಂಗಳ ವಾಧ್ಯದೊಂದಿಗೆ ಪೂಜೆ ನೆರವೇರಿಸಿದ ನಂತರ ರಥದ ಮುಂಭಾಗದಲ್ಲಿನ ಬಾಳೆ ಕಂಬ ಕುಡಿಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು, ಈ ವೇಳೆ ಹಾಜರಿದ್ದು ಭಕ್ತರು ರಥಕ್ಕೆ ದವನ ಹಾಗೂ ಬಾಳೆಹಣ್ಣು ಎಸೆಯುವ ಮೂಲಕ ಭಕ್ತಿಯಿಂದ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ದೇವಾಲಯದ ಪ್ರಧಾನ ಆರ್ಚಕ ಬಾಲಕೃಷ್ಣ ಭಟ್ಟ ಮತ್ತು ಆರ್ಚಕ ವೃಂದ ಧಾರ್ಮಿಕ ವಿಧಿ ವಿಧಾನ ನೇರವೇರಿಸಿ ಮಹಾ ಮಂಗಳಾರತಿ ಮಾಡಿದರು, ರಥೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡು ರಥ ಎಳೆಯುವ ಮೂಲಕ ದೇವರ ಕೃಪೆಗೆ ಪಾತ್ರರಾದರು, ಹಲವು ಭಕ್ತರು ಕಳಸ ಹೊತ್ತು ತಮ್ಮ ಇಷ್ಠಾರ್ಥ ಪ್ರಾರ್ಥನೆ ಸಲ್ಲಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಕೋಟ ಮೋಹನ್ ಅವರು ಮಾತನಾಡಿ, ಹಲವು ದಶಕಗಳಿಂದ ಪ್ರತಿ ವರ್ಷವೂ ಪುರಸಭೆ ಸಹಕಾರದಲ್ಲಿ ದೇವರ ಮನೆತನದವರ ಸಹಕಾರದಲ್ಲಿ ರಥೋತ್ಸವ ನೆರವೇರಿಸಲಾಗುತ್ತಿದೆ. ಈ ವರ್ಷ ಪುರಸಭೆಯಿಂದ ರಥದ ಮನೆ, ನವಗ್ರಹ ಮಂಟಪ ನಿರ್ಮಾಣ ಮಾಡಿ ದೇವಾಲಯಕ್ಕೆ ನೀಡಲಾಗಿದೆ ಎಂದರು.

ರಥೋತ್ಸವಕ್ಕೆ ಮೊದಲು ವಿವಿಧ ಕೋಲಾಟ ತಂಡದಿಂದ ದೇವಾಲಯದ ಆವರಣದಲ್ಲಿ ಹಾಗೂ ರಥದ ಮುಂಭಾಗ ಕೋಲಾಟ ನಡೆಯಿತು. ದೇವಾಲಯ ಆವರಣದಲ್ಲಿ ಸೋಮನ ಕುಣಿತ ನಡೆಯಿತು.

ಬ್ರಾಹ್ಮಣ ಯುವ ವೇದಿಕೆ ಪದಾಧಿಕಾರಿಗಳಾದ ಕೃಷ್ಣ ಪ್ರಸಾದ್, ವೆಂಕಟೇಶ್, ವಿಶ್ವನಾಥ್, ಲಕ್ಷ್ಮೀಶ, ಶಾಮಿರಘು, ಮಂಜ ಎಹೆಬ್ಬಾರ್, ಯೋಗಾನಂದ್, ಪುರಸಭಾ ಮಾಜಿ ಅಧ್ಯಕ್ಷರಾದ ಬನಶಂಕರಿ, ಶಶಿಧರ್, ಮಾಜಿ ಸದಸ್ಯರಾದ ರಾಣಿ, ರಾಧಾ, ಕವಿತಾ, ಲಕ್ಷ್ಮೀ, ಭಾಗ್ಯಮ್ಮ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸುರೇಶ್, ಜಿಪಂ ಮಾಜಿ ಸದಸ್ಯ ಸಿ.ಕೆ.ಕುಸುಮಾರಾಣಿ, ಪುರಸಭೆ ಮುಖ್ಯಾಧಿಕಾರಿ ಯತೀಶ್ ಸಿಬ್ಬಂದಿಗಳು ಇದ್ದರು.

> **ರಾಷ್ಟ್ರಮಟ್ಟದಲ್ಲಿ ಹೆಸರುವಾಸಿ**
> ಜಿಲ್ಲೆಗೆ ಚನ್ನರಾಯಪಟ್ಟಣ ತಾಲ್ಲೂಕು ದೇವಾಲಯದ ಕಳಸವಿದ್ದಂತೆ. ಸಾಕಷ್ಟು ಧಾರ್ಮಿಕ ಕಾರ್ಯಕ್ರಮಗಳು ನಡೆಯುವುದು ರಾಷ್ಟ್ರಮಟ್ಟದಲ್ಲಿಯೂ ಧಾರ್ಮಿಕ ಕಾರ್ಯಕ್ರಮ ನಡೆಯುವುದು ಈ ತಾಲ್ಲೂಕಿನಲ್ಲಿ ಮಾತ್ರ, ಇದು ಜಿಲ್ಲೆಗೆ ಹೆಮ್ಮಯ ಸಂಗತಿಯಾಗಿದೆ.
> ಜಾತ್ರೆ ಹಾಗೂ ಹಬ್ಬ ಸಾರ್ವಜನಿಕರನ್ನು ಒಗ್ಗೂಡಿಸುವುದರೊಂದಿಗೆ ಪಟ್ಟಣ ಹಾಗೂ ಗ್ರಾಮದ ಜನತೆಯ ದ್ವೇಶ ಮರೆತು ಸಂತೋಷಕರ ವಾತಾವರಣ ಸೃಷ್ಠಿಸುವ ಮಹತ್ವ ಹೊಂದಿದೆ, ಅನಿರೀಕ್ಷಿತವಾಗಿ ಈ ರಥೋತ್ಸವದಲ್ಲಿ ಪಾಲ್ಗೊಂಡಿದ್ದೇನೆ, ಭಕ್ತರ ಸ್ವಾಗತಿಸಿ ನನ್ನೊಟ್ಟಿಗೆ ರಥೋತ್ಸವದಲ್ಲಿ ಹೆಜ್ಜೆ ಹಾಕಿದ್ದು ಬಹಳ ಸಂತೋಷ ತಂದಿದೆ.
> - ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ.

